# ಮನನೊಂದುಕೊಳ್ಳುವುದು

## ಅದನ್ನು ಸ್ವೀಕರಿಸಬೇಡಿ



ಆಶೀಷ್ ರಾಯ್‌ಚೂರ್

**ಉಚಿತವಾದ ಹಂಚಿಕೆಗಾಗಿ ಮಾತ್ರ**
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತ ಪ್ರತಿ: 2023

**ಸಂಪರ್ಕ ಮಾಹಿತಿ**

All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

ದೂರವಾಣಿ: +91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ಸೂಚಿಸದ ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು ಜೆ.ವಿ (ಬಿಎಸ್ ಐ), ಆವೃತ್ತಿಯಿಂದ ತೆಗೆದುಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ ಅನುಮತಿಯಿಂದ ಬಳಸಲಾಗಿದೆ.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ ''ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ'' ಎಂಬ ಪುಟವನ್ನು ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ

**ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್ಸೈಟ್‌ಗಳು**

**ಪ್ರಸಂಗಗಳು:** apcwo.org/sermons | **ಪುಸ್ತಕಗಳು:** apcwo.org/books | **ಚರ್ಚ್ ಆಪ್:** apcwo.org/app
**ಸತ್ಯವೇದ ಕಾಲೇಜು:** apcbiblecollege.org | **ಇ-ಕಲಿಕೆ:** apcbiblecollege.org/elearn
**ಸಲಹಾ ಸೇವೆ:** chrysalislife.org | **ಸಂಗೀತ:** apcmusic.org
**ಸೇವಕರುಗಳ ಅನ್ಯೋನ್ಯತೆ:** pamfi.org | **ಏಪಿಸಿ ಪ್ರಪಂಚ ಸೇವೆಗಳು:** apcworldmissions.org

(Kannada - Offenses–Don't Take Them)

# ಮನಸೊಂದುಕೊಳ್ಳುವುದು

## ಅದನ್ನು ಸ್ವೀಕರಿಸಬೇಡಿ

# ವಿಷಯಸೂಚಿ

ಪರಿಚಯ

1. ಒಂದು ಬೋನು ಮತ್ತು ಒಂದು ಮುಗ್ಗರಿಸುವ-ಬಂಡೆಗಲ್ಲು 1

2. ನೋವುಗಳು ಬಂದೇ ಬರುತ್ತವೆ 5

3. ಆಯ್ಕೆಯು ನಿಮಗೆ ಬಿಟ್ಟದ್ದು 22

4. ನೋವು ಉಂಟಾದಾಗ ಕಾರ್ಯ ನಡೆಸಬೇಡಿ 31

5. ಪ್ರೀತಿಯು ನಮ್ಮನ್ನು ಸ್ವತಂತ್ರರನ್ನಾಗಿ ಇಡುತ್ತದೆ 38

# ಪರಿಚಯ

ಜೀವನದಲ್ಲಿ, ನಾವೆಲ್ಲರೂ ಅವಮಾನದ ನೋವನ್ನು ಅನುಭವಿಸುತ್ತೇವೆ. ನೋವುಗಳು ಎಲ್ಲಾ ವಿಧದ ಸಂಗತಿಗಳಿಂದ ಉಂಟಾಗಬಹುದು. ಕೆಲವು ಬಾರಿ ಅತಿಚಿಕ್ಕ ವಿಷಯಗಳಿಂದಲೇ ನಮಗೆ ನೋವು ಉಂಟಾಗಬಹುದು. ಆಗ ನಮಗೆ ಅವಮಾನವಾಗುತ್ತದೆ. ಯಾರು ನಮಗೇನಾದರೂ ಹೇಳಿದರೆ ನಮಗೆ ನೋವಾಗಬಹುದು. ನಮಗೆ ಅವಕಾಶ ಸಿಗಲಿಲ್ಲವೆಂದಾಗಲಿ, ಅಥವಾ ನಮಗೆ ಬೇಕಾದ ಗುರುತಿಸುವಿಕೆಯಾಗಲಿ ಅಥವಾ ನಮಗೆ ಸಿಗಬೇಕಾದ ಬಡ್ತಿ ದೊರಕದೆ ಹೋದಾಗ ನಮಗೆ ನೋವುಂಟಾಗುತ್ತದೆ. ಈ ನೋವನ್ನು ನಾವು ಒಳಗೆ ಸ್ವೀಕರಿಸಿದಾಗ ಅದು ನಮ್ಮ ಒಳಗೆ ಕಾರ್ಯ ಮಾಡುತ್ತಾ ನಾವು ಯೋಚಿಸುವುದಕ್ಕಿಂತಲೂ ಹೆಚ್ಚಾಗಿ ನಮ್ಮ ಮೇಲೆ ಪ್ರಭಾವ ಬೀರುತ್ತದೆ. ಓರ್ವ ವ್ಯಕ್ತಿಯು ಪರಿಹಾರವಾಗದೆ ಇರುವ ನೋವಿನ ಪರಿಧಿಯಲ್ಲಿ ಕಾರ್ಯ ಮಾಡುವಾಗ ಅವನ ಮಾತುಗಳು, ಅಥವಾ ಆಲೋಚಿಸುವ ಮತ್ತು ವರ್ತಿಸುವ ವಿಧವು ತರ್ಕಬದ್ಧವಾಗಿ ಇರುವುದಿಲ್ಲ ಹಾಗೂ ಆತನು ವಿಲಕ್ಷಣವಾಗಿ ವರ್ತಿಸಬಹುದು. ಈ ಸಂಗತಿಗಳು ಸಭೆಯ ಮಧ್ಯದಲ್ಲಿ, ದೇವ ಜನರ ಮಧ್ಯದಲ್ಲಿ ಕಂಡುಬರುವಾಗ–ಹಿಂದೆ ಬೈಯುವುದು, ಚಾಡಿ ಮಾತುಗಳು, ಜನರು ಒಂದು ಸಭೆಯನ್ನು ಬಿಟ್ಟು ಇನ್ನೊಂದು ಸಭೆಗೆ ಹೋಗುವುದು, ಸಭೆಗಳ ಮಧ್ಯದಲ್ಲಿ ವಿಭಜನೆ, ನಾಯಕರುಗಳು ಪರಸ್ಪರ ದೂರವಾಗುವುದು, ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಅಂಗವು ಬಲಹೀನಗೊಳ್ಳುವುದು ಮುಂತಾದ ಅತ್ಯಂತ ದುಃಖಕರವಾದ ವಿಷಯಗಳನ್ನು ನೋಡುತ್ತೇವೆ. ಅದೇನೇ ಇದ್ದರೂ ನೋವುಗಳನ್ನು ಹೇಗೆ ಜಯಿಸುವುದು ಎಂಬುದನ್ನು ನಾವು ಅರ್ಥ ಮಾಡಿಕೊಂಡಲ್ಲಿ ಈ ಸಂಗತಿಗಳನ್ನು ನಾವು ತಪ್ಪಿಸಬಹುದು ಹಾಗೂ ಸ್ಥಳೀಯ ಸಭೆ ಹಾಗೂ ಕ್ರಿಸ್ತನ ದೇಹವಾದ ಸಭೆ ಇನ್ನೂ ಹೆಚ್ಚು ಬಲ ಹೊಂದಬಹುದು.

ನಮ್ಮೆಲ್ಲರ ಜೀವಿತದಲ್ಲಿ ಸಾಮಾನ್ಯವಾಗಿ ಸಂಭವಿಸುವ ಈ ಸಂಗತಿಯ ಬಗ್ಗೆ ಸತ್ಯವೇದವು ಏನು ಹೇಳುತ್ತದೆ? ನಾವು ನೋವಿಗೆ ಒಳಗಾದಾಗ ಯಾವ ರೀತಿಯಲ್ಲಿ ಪ್ರತಿಕ್ರಿಯೆ ನೀಡಬೇಕು? ನಮಗೆ ನೋವುಂಟಾದಾಗ ನಮ್ಮೊಳಗೆ ಉಂಟಾಗುವ ನಕಾರಾತ್ಮಕವಾದ ಭಾವನೆಗಳನ್ನು ನಾವು ಹೇಗೆ ವಿಸರ್ಜಿಸಬಹುದು?

ಸಾಮಾನ್ಯವಾದ ಸರಳವಾದ ಈ ಅಧ್ಯಯನದಲ್ಲಿ ಈ ಎಲ್ಲಾ ಪ್ರಶ್ನೆಗಳಿಗೆ ನಾವು ಉತ್ತರವನ್ನು ಕಂಡುಕೊಂಡು ಈ ನೋವುಗಳನ್ನು ಮೆಟ್ಟಿನಿಂತು ಯಾವ ರೀತಿಯಲ್ಲಿ ಸ್ವತಂತ್ರವಾಗಿ ಜೀವಿಸಬಹುದು ಎಂಬುದನ್ನು ಕಲಿಯೋಣ.

ಯಾವಾಗಲೂ ನೋವನ್ನು ಜಯಿಸಿ ನಿಲ್ಲುವ ಜೀವಿತವನ್ನು ಜೀವಿಸಿರಿ.

ದೇವರು ನಿಮ್ಮನ್ನು ಆಶೀರ್ವದಿಸಲಿ !
ಆಶಿಷ್ ರಾಯಚೂರು

# 1

# ಒಂದು ಬೋನು ಮತ್ತು ಒಂದು ಮುಗ್ಗರಿಸುವ-ಬಂಡೆಗಲ್ಲು

ನಮಗೆ ಯಾರಾದರೂ ಮಾತಿನಲ್ಲಿ ಅಥವಾ ಕ್ರಿಯೆಯಲ್ಲಿ ಏನಾದರೂ ಬೇಸರಿಕೆಯನ್ನು ಉಂಟು ಮಾಡಿದರೆ ನಮಗೆ ಅವಮಾನವಾಗಿ ನಮ್ಮನ್ನು ನಾವು ನೋವುಪಟ್ಟುಕೊಳ್ಳುತ್ತೇವೆ. ವಿಭಿನ್ನ ಜನರು ತಮಗೆ ಉಂಟಾದ ಅವಮಾನಗಳಿಗೆ ವಿಭಿನ್ನವಾದ ರೀತಿಯಲ್ಲಿ ಪ್ರತಿಕ್ರಿಯೆ ನೀಡುತ್ತಾರೆ. ಕೆಲವರು ಕೋಪಗೊಂಡು ಅದನ್ನು ಎದುರಿಸುತ್ತಾರೆ. ಕೆಲವರು ಹಿಂದೆ ಸರಿದು ಆ ವ್ಯಕ್ತಿಗಳಿಂದ ಸಂಪರ್ಕ ಕಡಿದುಕೊಂಡು ತಮ್ಮನ್ನು ತಾವು ದೂರ ಮಾಡಿಕೊಳ್ಳುತ್ತಾರೆ. ಇನ್ನು ಕೆಲವರು ತಮಗೆ ಯಾರಿಂದ ಅವಮಾನವಾಯಿತೋ ಅವರ ಕುರಿತು ಸುಳ್ಳು ಸುದ್ದಿ ಹಬ್ಬಿಸಿ ಅವರ ಹೆಸರನ್ನು ಹಾಳು ಮಾಡುವುದರ ಮೂಲಕ, ಅವರನ್ನು ದೂಷಿಸುವುದರ ಮೂಲಕ, ಅವರನ್ನು ಎದುರಿಸುತ್ತಾರೆ. ನಾವೆಲ್ಲರೂ ಈ ಅನುಭವದಲ್ಲಿ ಹಾದು ಹೋಗಿದ್ದೇವೆ, ಹಾಗೂ ಇವುಗಳಲ್ಲಿ ಒಂದಲ್ಲ ಒಂದು ವಿಧದಲ್ಲಿ ಪ್ರತಿಕ್ರಿಯಿಸಿರುತ್ತೇವೆ. ನಮ್ಮ ಮನಸ್ಸಿಗೆ ನೋವಾಗಿದೆ, ಆದುದರಿಂದ ನಾವು ಹೀಗೆ ಮಾಡಲೇಬೇಕು, ಇದು ನಮ್ಮ ಹಕ್ಕು ಎಂಬಂತೆ ನಾವು ಭಾವಿಸುತ್ತೇವೆ. ಒಂದಲ್ಲ ಒಂದು ವಿಧದಲ್ಲಿ ನಾವು ಅವರಿಗೆ ಪ್ರತಿಕ್ರಿಯೆ ನೀಡಿದರೆ ಮಾತ್ರ ನಮ್ಮ ಮನಸ್ಸಿಗೆ ಸಮಾಧಾನವಾಗುತ್ತದೆ, ಹಾಗೂ ನಾವು ಅನುಭವಿಸಿದ ನೋವು ಕಡಿಮೆಯಾಗುತ್ತದೆ ಎಂದು ನಾವು ಭಾವಿಸುತ್ತೇವೆ.

ಈಗ ನಾವು ನೋವುಪಟ್ಟುಕೊಳ್ಳುವುದು ಎಂಬ ವಿಷಯದ ಕುರಿತಾಗಿ ಸತ್ಯವೇದದ ದೃಷ್ಟಿಕೋನವನ್ನು ನೋಡೋಣ. ಹೀಗಾದಲ್ಲಿ ಒಂದು ವೇಳೆ ನಾವು ಸಂಗತಿಗಳನ್ನು ವಿಭಿನ್ನವಾಗಿ ನೋಡುವ ಸಾಧ್ಯತೆಯೂ ಇದೆ.

**ಮತ್ತಾಯ 16:23**
**ಆತನು ತಿರುಗಿಕೊಂಡು ಪೇತ್ರನಿಗೆ–ಸೈತಾನನೇ, ನನ್ನ ಮುಂದೆ ನಿಲ್ಲಬೇಡ, ನಡೆ, ನನಗೆ ನೀನು ವಿಘ್ನವಾಗಿದ್ದೀ; ನಿನ್ನ ಯೋಚನೆ ಮನುಷ್ಯರ ಯೋಚನೆಯೇ ಹೊರತು ದೇವರದಲ್ಲ ಎಂದು ಹೇಳಿದನು.**

''ನೋವುಪಟ್ಟುಕೊಳ್ಳುವುದು'' ಎಂಬ ಪದವು ಗ್ರೀಕ್ ಭಾಷೆಯಲ್ಲಿ 'ಸ್ಕಾಂಡಲನ್' ಎಂದು ಇದೆ. ಇದು ಎರಡು ಸಂಗತಿಗಳನ್ನು ತಿಳಿಸುತ್ತದೆ.

1) **ಒಂದು ಬೋನು:** ಇದು ಒಂದು ಬೋನಿಗೆ ಇಟ್ಟಿರುವ ಕೋಲನ್ನು ಸೂಚಿಸುತ್ತದೆ, ಅಥವಾ (ಆಸೆ ತೋರಿಸುವದು) ಎಂಬ ಅರ್ಥವನ್ನು ಕೊಡುತ್ತದೆ ಹಾಗೂ ಇದು ಒಂದು ಪ್ರಚೋದನೆ ಎಂಬ ಬೋನು ಆಗಿರುತ್ತದೆ. ನೀವು ಈ ಬೋನಿನ ಕೋಲನ್ನು ಮುಟ್ಟಿದರೆ (ಅಥವಾ ಆ ಪ್ರಚೋದನೆಗೆ ಒಳಗಾದರೆ) ನಿಮ್ಮ ಮೇಲೆ ಬೋನು ಬೀಳುತ್ತದೆ ನೀವು ಆಗ ಅದರ ಒಳಗೆ ಸಿಕ್ಕಿ ಬೀಳುತ್ತೀರಿ.

2) **ಮುಗ್ಗರಿಸುವ-ಬಂಡೆಗಲ್ಲು:** ಒಂದು ಎಡವಟ್ಟು. ಇದು ಎಡವುವಂತೆ ಮಾಡುವ ತಡೆಯಾಗಿದೆ. ಇದು ಓರ್ವ ವ್ಯಕ್ತಿಯು ಎಡವಿ ಬೀಳುವಂತೆ ಮಾಡುವ ಬಂಡೆಗಲ್ಲಿಗೆ ಸಮಾನವಾಗಿದೆ. ಆತನು ಅದನ್ನು ಎಡವಿ ಮುಗ್ಗರಿಸಿ ಬೀಳುತ್ತಾನೆ. ಆದುದರಿಂದ ನೋವುಪಟ್ಟುಕೊಳ್ಳುವುದು ಓರ್ವ ವ್ಯಕ್ತಿಯು ಮುಗ್ಗರಿಸಿ ಎಡವಿ ಬೀಳುವಂತೆ ಮಾಡುವ ಒಂದು ಸಂಗತಿಯಾಗಿದೆ.

ನೋವುಪಟ್ಟುಕೊಳ್ಳುವ ಕೊನೆಯ ಫಲಿತಾಂಶವೇ ಓರ್ವ ವ್ಯಕ್ತಿಯು ತಪ್ಪು ಮಾಡುವಂತೆ, ಅಥವಾ ಪಾಪ ಮಾಡುವಂತೆ ಅವನನ್ನು ಸೆಳೆಯುವುದು ಆಗಿದೆ.

ಮತ್ತಾಯ 16ನೇ ಅಧ್ಯಾಯದಲ್ಲಿರುವ ಈ ಘಟನೆಯಲ್ಲಿ ಪೇತ್ರನು ಬಹು ಕಾಳಜಿಯಿಂದಲೂ, ಯಥಾರ್ಥತೆಯಿಂದಲೂ ತುಂಬಿದವನಾಗಿ ಕರ್ತನಾದ ಯೇಸು ಕ್ರಿಸ್ತನ ಕುರಿತಾಗಿ ಮಾತನಾಡುವಂತೆ ಕಾಣುತ್ತದೆ. ಆದರೆ ಯೇಸು ಇಲ್ಲಿ ಬೇರೆ ಸಂಗತಿಯನ್ನು ಗಮನಿಸುತ್ತಾನೆ. ಸೈತಾನನು ಈ ಮಾತುಗಳ ಮೂಲವಾಗಿರುವುದನ್ನೂ, ತಾನು ಹಿಂಬಾಲಿಸುತ್ತಿದ್ದ ದೇವರ ಕುರಿತಾದ ವಿಷಯಗಳಿಗೆ ಅವನು ಅಡ್ಡಿಯೂ ವಿಘ್ನವೂ ಆಗಿರುವುದನ್ನೂ, ನೋಡುತ್ತಾನೆ.

ನಿಜವಾಗಿ ಹೇಳಬೇಕೆಂದರೆ ಒಂದು ವಿಘ್ನವು, ಅದು ಸೈತಾನನು ಇಡುವ ಒಂದು ಬೋನೂ, ಮನುಷ್ಯರು ಎಡವಿ ಬೀಳಲು ಆತನು ಇಡುವ ಬಲೆಯೂ ಆಗಿದೆ. ಇದು ದೇವರು ನಮಗೆ ಇಟ್ಟ ಆತನ ಉದ್ದೇಶಗಳಲ್ಲಿ ನಾವು ಮುಂದುವರೆಯದೆ ಸೈತಾನನ ಬಲೆಗೆ, ಈ ಬೋನಿಗೆ ಸಿಕ್ಕಿಬಿದ್ದು ನಾವು ಎಡವಿ ಬೀಳಬೇಕು ಎಂಬದೇ ಸೈತಾನನ ಉದ್ದೇಶವಾಗಿರುತ್ತದೆ.

ಇನ್ನು ಮುಂದೆ ನಿಮಗೆ ನೋವು ಉಂಟಾದಾಗ, ಅದರ ಹಿಂದಿನ ಕಾರಣ ಯಾವುದೇ ವ್ಯಕ್ತಿ ಅಥವಾ ಯಾವುದೇ ಘಟನೆ ಆಗಿದ್ದರೂ, ಇದರ ಹಿಂದೆ ಇರುವ

ಆತ್ಮಿಕ ಅರ್ಥ ಏನು ಎಂಬುದನ್ನು ನಿಧಾನವಾಗಿ ಆಲೋಚಿಸಿ. ಇದು ಯಾವುದೇ ವ್ಯಕ್ತಿಗೆ ಸಂಬಂಧಿಸಿದ್ದಲ್ಲ, ಇದು ಯಾವುದೇ ಸನ್ನಿವೇಶಕ್ಕೆ ಸಂಬಂಧಿಸಿದ್ದಲ್ಲ. ನಿಮಗೆ ನೋವುಂಟು ಮಾಡಿರುವ ವ್ಯಕ್ತಿ ಅಥವಾ ಘಟನೆಯ ಹಿಂದೆ ಇನ್ನೇನೋ ಬೇರೆ ಗಂಭೀರವಾದ ಸಂಗತಿಗಳ ಪಾತ್ರವಿರುತ್ತದೆ. ಈ ನೋವು ಒಂದು ಬೋನು ಆಗಿರುತ್ತದೆ ಹಾಗೂ ಅದು ನಿಮ್ಮನ್ನು ಎಡವಿ ಬೀಳುವಂತೆ ಮಾಡುತ್ತದೆ. ನೀವು ಇದಕ್ಕೆ ಒಳಗಾದರೆ ಸೈತಾನನು ನಿಮ್ಮನ್ನು ಹಿಡಿದು ಎಡವಿ ಬೀಳುವಂತೆ ಮಾಡಿ ದೇವರ ಉದ್ದೇಶಗಳಲ್ಲಿ ನೀವು ಮುಂದೆ ಸಾಗದಂತೆ ಮಾಡುವ ಅವಕಾಶವನ್ನು ಪಡೆದುಕೊಳ್ಳುತ್ತಾನೆ.

ನಿಮ್ಮ ಜೀವಿತದಲ್ಲಿ ಸೈತಾನನಿಗೆ ಈ ಅವಕಾಶ ನೀವು ಕೊಡುವಿರೋ? ಖಂಡಿತವಾಗಿಯೂ ಇಲ್ಲ ! ಈ ನೋವುಗಳ ಹಿಂದೆ ಇರುವ ಮೂಲ ಅಥವಾ ಇದರ ಹಿಂದಿರುವ ಕಾರಣವು ಏನೇ ಆಗಿದ್ದರೂ ನಿಮಗೆ ನೋವುಂಟಾದಾಗ ನಿಮ್ಮ ಪ್ರತಿಕ್ರಿಯೆಯು ಆ ನೋವನ್ನು ಹೃದಯದಿಂದ ಹೊರಗಿಡುವಂತಿರಬೇಕು. ಇದಕ್ಕೆ ನಿಮ್ಮ ಹೃದಯದಲ್ಲಿ ಸ್ಥಳವನ್ನೇ ನೀಡಬಾರದು.

## ಅವಲೋಕನ

1) ಇತ್ತೀಚೆಗೆ ನಿಮಗೆ ನೋವು ಉಂಟಾದ ಸಂದರ್ಭವನ್ನು ನೆನಪು ಮಾಡಿಕೊಳ್ಳಿ.

- ನಿಮಗೆ ಯಾವುದು ನೋವನ್ನುಂಟು ಮಾಡಿತು?
- ನಿಮಗೆ ಹೇಗನಿಸಿತು? ನಿಮಗೆ ನೋವು ಉಂಟಾಗಿದೆ ಎಂದು ನಿಮಗೆ ಹೇಗೆ ತಿಳಿಯಿತು?
- ನೀವು ಏನು ಮಾಡಿದಿರಿ? ಹಾಗೂ ಈ ನೋವನ್ನು ನೀವು ಅನುಭವಿಸಿದಾಗ ಅನುಭವಿಸಿದಾಗ ಅದನ್ನು ಹೇಗೆ ನಿಭಾಯಿಸಿದಿರಿ?
- ಹಿಂತಿರುಗಿ ನೋಡುವಾಗ, ನಿಮಗೆ ನೋವುಂಟಾದಾಗ, ನೀವು ಯಾವ ರೀತಿಯಲ್ಲಿ ಪರಿಸ್ಥಿತಿಗಳನ್ನು ನಿಭಾಯಿಸಿದಿರಿ ಎಂಬುದರ ಕುರಿತಾಗಿ ಸಂತೋಷವಾಗಿದ್ದೀರೋ? ಅಲ್ಲಿ ಯೇಸುವಿಗೆ ಮಹಿಮೆ ಆಯಿತೋ? ಸಂಗತಿಗಳನ್ನು ಇನ್ನೂ ಬೇರೆ ರೀತಿಯಲ್ಲಿ ನೀವು ನಿಭಾಯಿಸಬಹುದಿತ್ತೆಂದು ಅನಿಸುತ್ತಿದೆಯೋ?

- ನಿಮಗೆ ನೋವುಂಟು ಮಾಡಿದ ಯಾವುದೇ ವ್ಯಕ್ತಿಯ ಜೊತೆಯಲ್ಲಿ ತಿರುಗಿ ನಿಮ್ಮ ಸಂಬಂಧವನ್ನು ಬೆಳೆಸುವುದಕ್ಕಾಗಿ ನೀವೇನಾದರೂ ಮಾಡಬೇಕಾಗಿದೆಯೋ (ಅಂತಹುದು ಏನಾದರೂ ಇದ್ದರೆ)?

# 2

# ನೋವುಗಳು ಬಂದೇ ಬರುತ್ತವೆ

ಈ ಅಧ್ಯಾಯದಲ್ಲಿ , ನಮಗೆ ಸಾಮಾನ್ಯವಾಗಿ ನೋವು ಉಂಟಾಗಬಹುದಾದ ಮೂರು ವಿಭಿನ್ನ ಮೂಲಗಳ ಕುರಿತಾಗಿ ನಾವು ಗಮನಿಸೋಣ. ಖಂಡಿತವಾಗಿ ಕೇವಲ ಇವೇ ಮೂರು ಮೂಲಗಳು ಮಾತ್ರವೇ ಇರುವದಿಲ್ಲ. ಆದರೂ ಇವು ಬಹುಶಃ ಸಾಮಾನ್ಯವಾದ ಮೂರು ಮೂಲಗಳಾಗಿವೆ:

1) ಲೋಕದಿಂದ ಉಂಟಾಗುವ ನೋವುಗಳು
2) ಉದ್ದೇಶ ಪೂರ್ವಕವಲ್ಲದೆ ಬರುವ ನೋವುಗಳು
3) ಅಧಿಕಾರದಲ್ಲಿರುವವರಿಂದ ಉಂಟಾಗುವ ನೋವುಗಳು

ವಿಶ್ವಾಸಿಗಳಿಗೆ ಅವರ ಆತ್ಮಿಕ ಜೀವಿತದಲ್ಲಿ ಯಾಕೆ ನೋವು ಬರಬಹುದು ಎಂಬಂಥ ಮೂರು ಕಾರಣಗಳನ್ನು ನಾವು ಚರ್ಚಿಸೋಣ. ಇದು ಕೇವಲ ವಿಶ್ವಾಸಿಗಳಿಗೆ ಸಂಬಂಧಿಸಿರುವಂತವುಗಳಾಗಿವೆ.

1) ದೇವರ ವಿಷಯವಾಗಿ ನೋವು ಹೊಂದಿರುತ್ತಾರೆ
2) ಯೇಸುವಿನ ನಿಮಿತ್ತವಾಗಿ ನೋವು ಹೊಂದಿರುತ್ತಾರೆ
3) ದೇವರ ವಾಕ್ಯದ ನಿಮಿತ್ತವಾಗಿಯೂ ಆತ್ಮನ ನಿಮಿತ್ತವಾಗಿಯೂ ನೋವು ಹೊಂದಿರುತ್ತಾರೆ.

ಮನುಷ್ಯರಿಗೆ ನೋವು (ಅಡ್ಡಿಗಳು) ಸಂಭವಿಸಬಹುದಾದ ಮೂರು ಸಾಮಾನ್ಯವಾದ ಮೂಲಗಳನ್ನು ನೋಡೋಣ.

## ಲೋಕದಿಂದ ಬರುವ ಅಡ್ಡಿಗಳು

**ಮತ್ತಾಯನು 18:6,7**

**6 ಆದರೆ ನನ್ನಲ್ಲಿ ನಂಬಿಕೆಯಿಡುವ ಈ ಚಿಕ್ಕವರಲ್ಲಿ ಒಬ್ಬನಿಗೆ ಯಾವನಾದರೂ ಅಡ್ಡಿಯಾದರೆ ಅಂಥವನ ಕೊರಳಿಗೆ ಬೀಸುವ ಕಲ್ಲು ಕಟ್ಟಿ ಅವನನ್ನು ಆಳವಾದ ಸಮುದ್ರದಲ್ಲಿ ಮುಣುಗಿಸಿಬಿಡುವದು ಅವನಿಗೆ ಹಿತವಾಗುವದು.**

**[7] ತೊಡಕುಗಳು ಬರುವದರಿಂದ ಲೋಕಕ್ಕೆ ಎಷ್ಟೋ ಕೇಡು! ತೊಡಕುಗಳು ಹೇಗಾದರೂ ಬರುವವು. ಆದಾಗ್ಯೂ ಯಾವ ಮನುಷ್ಯನಿಂದ ತೊಡಕು ಬರುತ್ತದೋ, ಅವನ ಗತಿಯನ್ನು ಏನು ಹೇಳಲಿ!**

ಅಡ್ಡಿಗಳು ಎಂಬುದಕ್ಕೆ ಗ್ರೀಕ್ ಭಾಷೆಯಲ್ಲಿ 'ಸ್ಕ್ಯಾಂಡಲನ್' ಎಂಬ ಪದವು ಉಪಯೋಗವಾಗಿರುತ್ತದೆ. ಈ ಶಬ್ದವನ್ನು ನಾವು ಹಿಂದಿನ ಅಧ್ಯಾಯದಲ್ಲಿ ಕಲಿತಿರುತ್ತೇವೆ. ಮತ್ತಾಯನು 18ನೇ ಅಧ್ಯಾಯದಲ್ಲಿ ಈ ವಚನಗಳಲ್ಲಿ ಉಪಯೋಗವಾಗಿರುವ ಅಡ್ಡಿಗಳು ಎಂಬ ಪದವು ಈ ಸಂದರ್ಭದಲ್ಲಿ ಆತನಿಗೆ ಸೇರಿರುವ ಈ ''ಚಿಕ್ಕವರಲ್ಲಿ'' ಎಂದು ತಿಳಿಸಿರುವ (ಮುಗ್ಧರು, ದೀನರು) ಇಂಥವರನ್ನು ಪಾಪ ಮಾಡುವಂತೆ ಎಳೆಯುವುದಾಗಿದೆ ಎಂಬ ಅರ್ಥ ಕೊಡುತ್ತದೆ.

7ನೇ ವಚನದಲ್ಲಿ ಮೂರು ಸಂಗತಿಗಳ ಬಗ್ಗೆ ತಿಳಿಸಲ್ಪಟ್ಟಿದೆ.

1) ಲೋಕದಲ್ಲಿ ನೋವುಗಳು, ತುಂಬಿವೆ.
2) ನೋವುಗಳು ಬಂದೇ ಬರುತ್ತವೆ.
3) ನೋವುಗಳು ಜನರಿಂದಲೇ ಬರುತ್ತವೆ.

ಲೋಕವು ತೊಡಕುಗಳಿಂದ, ಅಡ್ಡಿಗಳಿಂದ ಮತ್ತು ನೋವುಗಳಿಂದ, ತುಂಬಿದೆ. ಆದುದರಿಂದಲೇ ಯೇಸು ಹೇಳಿದ್ದಾನೆ ''*ತೊಡಕುಗಳು ಬರುವುದರಿಂದ ಲೋಕಕ್ಕೆ ಎಷ್ಟೋ ಕೇಡು!*'' ಲೋಕವು ಬೋನು, ಪಾಶಗಳಿಂದಲೂ ತುಂಬಿ ಯೇಸುವನ್ನು ನಂಬುವವರು ಎಡವಿ ಬೀಳುವಂತೆ ಮಾಡುವುದಾಗಿದೆ ಹಾಗೂ ಅವರು ಪಾಪಮಾಡಿ ತಪ್ಪು ಮಾಡಿ ನಂಬಿಕೆಯನ್ನು ಬಿಟ್ಟು ದೂರ ಹೋಗುವಂತೆ ಮಾಡುತ್ತವೆ. ಅಂತ್ಯಕಾಲವು ಹತ್ತಿರವಾಗುತ್ತಿರುವಂತೆ ಕರ್ತನಾದ ಯೇಸುವು ಮತ್ತಾಯನು 24:10 ರಲ್ಲಿ ಎಚ್ಚರಿಸಿದ್ದಾನೆ, ಅದೇನೆಂದರೆ–''*ಆಗ ಅನೇಕರು ಹಿಂಜರಿದು ಒಬ್ಬರನ್ನೊಬ್ಬರು ಹಿಡುಕೊಡುವರು; ಒಬ್ಬರ ಮೇಲೊಬ್ಬರು ದ್ವೇಷ ಮಾಡುವರು.*'' ಆಗ ಲೋಕವು ಹೀಗಿರುವದು.

ಅಡ್ಡಿಗಳು ಬಂದೇ ಬರುತ್ತವೆ. ವಿಶ್ವಾಸಿಗಳಾದ ನಮಗೆ ತೊಡಕುಗಳು ಬರುವುದೇ ಇಲ್ಲವೆಂದಿಲ್ಲ. ಲೋಕವು ತೊಡಕುಗಳಿಂದಲೂ, ಅಡ್ಡಿ ಗಳಿಂದಲೂ, ನೋವುಗಳಿಂದಲೂ ತುಂಬಿರುತ್ತವೆ ಹಾಗೂ ನಾವು ಈ ಲೋಕದಲ್ಲಿ ಜೀವಿಸುತ್ತಿದ್ದೇವೆ. ಹಾಗೂ ಈ ಲೋಕವು ನಿಮಗೆ ವಿರುದ್ಧವಾಗಿ ತೊಡಕುಗಳನ್ನು ಅಡ್ಡಿಗಳನ್ನು ನೋವುಗಳನ್ನು ಎಸೆಯುವುದು ಮಾತ್ರವಲ್ಲದೆ ನೀವು ಎಡವಿ ಬೀಳುವಂತೆ ನಿಮಗೆ ವಿರುದ್ಧವಾಗಿ ಬೋನುಗಳನ್ನು ಒಡ್ಡುತ್ತದೆ. ದುಃಖಕರವಾದ ಸಂಗತಿಯೇನೆಂದರೆ

ಕೆಲವು ಬಾರಿ ಇಂತಹ ತೊಡಕುಗಳು ಇತರ ವಿಶ್ವಾಸಿಗಳಿಂದಲೇ ಬರಬಹುದು. ಇದಕ್ಕಾಗಿ ನೀವು ಯಾವಾಗಲೂ ಸಿದ್ಧರಾಗಿರಬೇಕು.

ತೊಡಕುಗಳು ಅಡ್ಡಿಗಳು ಜನರ ಮೂಲಕವೇ ಬರುತ್ತವೆ. ''ಯಾವ *ಮನುಷ್ಯನಿಂದ ತೊಡಕುಗಳು ಬರುತ್ತವೆಯೋ ಅವನ ಗತಿಯನ್ನು ಏನೆಂದು ಹೇಳಲಿ''* ಎಂದು ಯೇಸುವು ಹೇಳುವಾಗ ಮನುಷ್ಯರಿಂದಲೇ ನಮಗೆ ತೊಡಕುಗಳು ಅಡಿಗಳು ಬರುತ್ತವೆ ಎಂಬುದನ್ನು ನಮಗೆ ಸ್ಪಷ್ಟಪಡಿಸುತ್ತಾನೆ. ಮನುಷ್ಯರೇ ನಿಮಗೆ ಹೇಳಬಾರದ್ದನ್ನು ಹೇಳಿ ಮಾಡಬಾರದ್ದನ್ನು ಮಾಡುತ್ತಾ ನೋವುಂಟು ಮಾಡುವುದರಿಂದ ತೊಡಕುಗಳು ಉಂಟಾಗುತ್ತದೆ.

ತೊಡಕುಗಳು ಯಾರಿಂದ ಬರುತ್ತವೆಯೋ ಅವರಿಗೆ ಏನಾಗುತ್ತದೆ ಎಂದು ಯೇಸುವು ಈಗಾಗಲೇ ತಿಳಿಸಿದ್ದಾನೆ. ಅವನಿಗೆ ಅಯ್ಯೋ, ತೊಂದರೆ, ನಾಶನ ಸಿದ್ಧವಾಗಿರುತ್ತದೆ. ಯಾರಾದರೂ ನಿಮ್ಮ ದಾರಿಯಲ್ಲಿ ಬೋನನ್ನು ಅಥವಾ ನೀವು ಎಡವಿ ಬಿಡಬೇಕೆಂದು ನಿಮಗೆ ಉರುಲನ್ನು ಒಡ್ಡಿದರೆ ನೀವು ಪಕ್ಕಕ್ಕೆ ಸರಿಯಿರಿ– ದೇವರೇ ಅವರನ್ನು ನೋಡಿಕೊಳ್ಳಲಿ. ಅಂಥವರಿಗೆ ವಿರುದ್ಧವಾಗಿ ನೀವು ಏನನ್ನೂ ಮಾಡುವ ಅವಶ್ಯಕತೆ ಇಲ್ಲ.

## ಉದ್ದೇಶ ಪೂರ್ವಕ ವಲ್ಲದೆ ಬರುವ ನೋವುಗಳು

**ಪ್ರಸಂಗಿ 7:21,22**

**21 (ಜನರು) ಆಡುವ ಮಾತುಗಳನ್ನೆಲ್ಲಾ ಲಕ್ಷ್ಯಕ್ಕೆ ತಾರದಿರು; ನಿನ್ನ ಆಳು ನಿನ್ನನ್ನು ಶಪಿಸುವದು ಕಿವಿಗೆ ಬಿದ್ದೀತು.**

**22 ನೀನೂ ಅನೇಕ ವೇಳೆ ಇತರರನ್ನು ಶಪಿಸಿದ್ದೀ ಎಂಬದಕ್ಕೆ ನಿನ್ನ ಮನಸ್ಸೇ ಸಾಕ್ಷಿ.**

ಕೆಲವು ಬಾರಿ ಜನರು ನಮ್ಮನ್ನು ನೋಯಿಸುವ ಉದ್ದೇಶವಿಲ್ಲದೆ ಮಾಡುವ ಸಂಗತಿಗಳ ಮೂಲಕ ನಮಗೆ ನೋವು ಉಂಟಾಗಬಹುದು. ಅವರು ಅಂತಹ ಉದ್ದೇಶವಿಲ್ಲದೆ, ಅದನ್ನು ತಮಾಷೆಗಾಗಿ ಹೇಳಿರಬಹುದು ಅಥವಾ ಮಾಡಿರಬಹುದು. ಆದರೂ ಕೂಡ ನಮಗೆ ಅವರ ಮಾತುಗಳಿಂದ ಅಥವಾ ಅವರು ಮಾಡಿದ ಕ್ರಿಯೆಗಳ ನಿಮಿತ್ತ ನೋವು ಉಂಟಾಗುತ್ತದೆ. ಇಂತಹ ಸಂಗತಿಗಳನ್ನು ನಾವು ಹೃದಯಕ್ಕೆ ತೆಗೆದುಕೊಳ್ಳದಂತೆ ಎಚ್ಚರವಹಿಸಬೇಕು. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಇಂತಹ ಸಂಗತಿಗಳನ್ನು ಲಘುವಾಗಿ ಪರಿಗಣಿಸಬೇಕು. ಅದನ್ನು ಬಿಟ್ಟು ಬಿಡಿ. ಅದನ್ನು ದೊಡ್ಡ ಸಂಗತಿಯಾಗಿ ಮಾಡಬೇಡಿ. ನಿಮಗೆ ಯಾವ ರೀತಿ

ಜನರು ಕೃಪೆ ತೋರಿಸಬೇಕೆಂದು ನೀವು ಬಯಸುವಿರೋ ಅದೇ ರೀತಿಯಲ್ಲಿ ನೀವೂ ಅವರಿಗೆ ಕೃಪೆಯನ್ನು ತೋರಿಸಿ. ಯಾಕೆಂದರೆ ನಾವೆಲ್ಲರೂ ಒಂದಲ್ಲ ಒಂದು ಸಮಯದಲ್ಲಿ ಸರಿಯಾಗಿ ಆಲೋಚಿಸದೆ ಬೇರೆ ಬೇರೆ ವಿಧದಲ್ಲಿ ನಾವು ಏನನ್ನು ಹೇಳಬಾರದೋ ಅದನ್ನು ಹೇಳಿರುತ್ತೇವೆ, ಏನನ್ನು ಮಾಡಬಾರದೋ ಅದನ್ನು ಮಾಡಿರುತ್ತೇವೆ. ನಮ್ಮ ಉದ್ದೇಶವು ಹಾಗಿಲ್ಲದಿದ್ದರೂ ಕೂಡ, ಇದರ ಮೂಲಕ ಯಾರಿಗೋ ನೋವು ಉಂಟಾಗಿರುತ್ತದೆ ಎಂಬುದಾಗಿ ಅನಂತರ ನಮಗೆ ಗೊತ್ತಾಗಿರುತ್ತದೆ.

## ಅಧಿಕಾರದಲ್ಲಿರುವವರಿಂದ ಉಂಟಾಗುವ ನೋವುಗಳು

**1 ಪೇತ್ರನು 2:18–21**

**[18] ಸೇವಕರೇ, ನಿಮ್ಮ ಯಜಮಾನರಿಗೆ ಪೂರ್ಣಭಯದಿಂದ ಅಧೀನರಾಗಿರಿ. ಒಳ್ಳೆಯವರೂ ಸಾತ್ವಿಕರೂ ಆಗಿರುವವರಿಗೆ ಮಾತ್ರವಲ್ಲದೆ ವಕ್ರಬುದ್ಧಿಯುಳ್ಳವರಿಗೂ ವಿಧೇಯರಾಗಿರಿ.**
**[19] ಒಬ್ಬನು ಅನ್ಯಾಯವಾಗಿ ಬಾಧೆಪಡುವವನಾಗಿದ್ದು ದೇವರು ನೋಡುತ್ತಾನೆಂದು ಅರಿತು ಆ ಕಷ್ಟವನ್ನು ಸಹಿಸಿಕೊಂಡರೆ ಅದು ಶ್ಲಾಘ್ಯವಾಗಿದೆ.**
**[20] ತಪ್ಪುಮಾಡಿ ಗುದ್ದು ತಿನ್ನುವದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದರಿಂದೇನು ಕೀರ್ತಿ? ಆದರೆ ಒಳ್ಳೇದನ್ನು ಮಾಡಿ ಬಾಧೆಪಡುವದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದು ದೇವರ ಮುಂದೆ ಶ್ಲಾಘ್ಯವಾಗಿದೆ.**
**[21] ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿಹೋದನು.**

1 ಪೇತ್ರನು 2ನೇ ಅಧ್ಯಾಯದಲ್ಲಿ 13ನೇ ವಚನದಿಂದ ಮೊದಲುಗೊಂಡು, ಪೇತ್ರನು ವಿಶ್ವಾಸಿಗಳು ಅಧಿಕಾರಕ್ಕೆ ಅಧೀನರಾಗಬೇಕು ಎಂಬುದನ್ನು ಬೋಧಿಸುತ್ತಾನೆ. ಆದರೆ ಇಂದಿನ ಸನ್ನಿವೇಶಗಳು ಹೊಸ ಒಡಂಬಡಿಕೆಯ ಕಾಲದಲ್ಲಿ ಇದ್ದ ಹಾಗೆ ಇಲ್ಲದಿದ್ದರೂ, ಸತ್ಯವು ಹಾಗೆಯೇ ಬದಲಾಗದೇ ಉಳಿದಿದೆ. ನಾವು ಉದ್ಯೋಗಿಗಳಾಗಿದ್ದರೆ ನಮ್ಮ ಕೆಲಸದ ಸ್ಥಳದಲ್ಲಿ ನಮ್ಮ ಮೇಲಿರುವ ಅಧಿಕಾರಿಗಳಿಗೆ ಅಧೀನರಾಗಬೇಕು. ಪ್ರಜೆಗಳಾಗಿರುವ ನಾವು ನಮ್ಮ ಸರಕಾರಕ್ಕೆ ಅಧೀನ ರಾಗಬೇಕು. ನಾವು ಕುಟುಂಬದ ಸದಸ್ಯರಾಗಿ ಇರುವುದಾದರೆ ನಮ್ಮ ಮನೆಯಲ್ಲಿ ಇರುವ ಮುಖ್ಯ ಅಧಿಕಾರಕ್ಕೆ ಅಧೀನರಾಗಬೇಕು.

ಒಂದು ವೇಳೆ ನಮ್ಮ ಮೇಲಿರುವ ಅಧಿಕಾರಿಗಳು ಕ್ರೂರಿಗಳಾಗಿ ನಮ್ಮನ್ನು ಕೆಟ್ಟ ರೀತಿಯಲ್ಲಿ ನಡೆಸಿಕೊಂಡರೆ, ನಾವು ಒಳ್ಳೆಯದನ್ನು ಮಾಡಿದರೂ ನಮಗೆ ಕಷ್ಟ ಕೊಟ್ಟರೆ ನಾವೇನು ಮಾಡಬೇಕು? ಇಂದಿನ ಸಂದರ್ಭದಲ್ಲಿ , ಇದು ನಮ್ಮ

ಕೆಟ್ಟ ಧಣಿಗಳಾಗಿರಬಹುದು ಇಲ್ಲವೇ ಪಕ್ಷಪಾತ ಮಾಡುವ ಧಣಿಗಳಾಗಿರಬಹುದು. ಅವರು ನಮ್ಮ ಸಾಧನೆಯನ್ನು ಕೀಳಾಗಿ ಕಾಣಬಹುದು, ಅವರು ನಮಗೆ ಬರುವ ಬಡ್ತಿಯನ್ನು ಬೇಕೆಂದೇ ತಡೆಹಿಡಿಯಬಹುದು, ಇತ್ಯಾದಿ. ಇಂತಹ ಸಂದರ್ಭದಲ್ಲಿ ನಾವೇನು ಮಾಡಬೇಕು? ಪೇತ್ರನು ಇದಕ್ಕೆ ಉತ್ತರ ನೀಡುತ್ತಾ ಹೀಗೆ ಹೇಳುತ್ತಾನೆ.

- ಅಧೀನರಾಗಿರಿ
- ಕಷ್ಟವನ್ನು ಸಹಿಸಿಕೊಳ್ಳಿರಿ
- ತಾಳ್ಮೆಯಿಂದಿರಿ

ಇವೆಲ್ಲವುಗಳನ್ನು ಮಾಡುವುದಕ್ಕೆ ಕೇವಲ ದೇವರೇ ನಮಗೆ ಕೃಪೆಯನ್ನು ನೀಡಬೇಕು. ಕ್ರಿಸ್ತನು ಪವಿತ್ರಾತ್ಮನ ಬಲದ ಮೂಲಕವಾಗಿ ಇದನ್ನು ಮಾಡಿದಂತೆ ನಾವು ಸಹ ಮಾಡಲು ಸಾಧ್ಯ. ನಾವು ಆಗ ಸಂಗತಿಗಳನ್ನು ಅವರ ದೃಷ್ಟಿಕೋನದಿಂದ ನೋಡಲು ಪ್ರಯತ್ನಿಸುತ್ತೇವೆ. ಅವರು ನಾಯಕತ್ವದಲ್ಲಿ ಇರುವ ಜನರು ಎಂಬ ದೊಡ್ಡ ಚಿತ್ರಣವು ನಮ್ಮ ಮನಸ್ಸಿನಲ್ಲಿ ಇರಬಹುದು. ಇದನ್ನು ನಾವು ಗಮನಿಸುವುದಿಲ್ಲ. ನಾವು ನಾಯಕರಾಗಿರುವ ಅವರ ಒತ್ತಡವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಬೇಕು.

ಒಂದು ವೇಳೆ ನಮಗೆ ಸತತ ಅನ್ಯಾಯ ಹಾಗೂ ನಮ್ಮ ಹಿತಕ್ಕೆ ಪದೇ ಪದೇ ಅಪಾಯವು ಸಂಭವಿಸುತ್ತಿರುವಲ್ಲಿ ನಾವು ಸುರಕ್ಷಿತ ಸ್ಥಳಕ್ಕೆ ಚಲಿಸಬೇಕು. ನಾವೀಗ ಆಧುನಿಕ ಯುಗದಲ್ಲಿ ಜೀವಿಸುತ್ತಿರುವದರಿಂದ, ಈ ಸಂದರ್ಭವು ನಮಗೆ ನಮ್ಮ ಉದ್ಯೋಗಗಳನ್ನು ಬದಲಾಯಿಸಿ ನಮ್ಮ ಸ್ಥಳಗಳನ್ನು ಬದಲಾಯಿಸುವ ಅವಕಾಶವನ್ನು ನೀಡುತ್ತದೆ. ಆದರೆ ಹೊಸ ಒಡಂಬಡಿಕೆಯ ಸಮಯದಲ್ಲಿ ಸೇವಕರು ಅಥವಾ ಗುಲಾಮರಿಗೆ ಇಂತಹ ಅವಕಾಶ ಇರಲಿಲ್ಲ. ಆದರೆ ಈಗಲಾದರೋ ಹೆಚ್ಚಿನ ಸಂದರ್ಭಗಳಲ್ಲಿ ನಮ್ಮ ಅಭಿಪ್ರಾಯವನ್ನು ತಿಳಿಸುವಂತಹ ಹಾಗೂ ನಾಯಕರ ಜೊತೆ, ನಮಗೆ ನೋವಾಗಿರುವಂತಹ ವಿಷಯಗಳ ಬಗ್ಗೆ ಚರ್ಚಿಸುವಂತಹ ಅವಕಾಶಗಳು ಇರುತ್ತವೆ. ಹಾಗೂ ಇಂತಹ ಸಂಗತಿಗಳನ್ನು ಕಾನೂನುಬದ್ಧವಾಗಿ ಹಾಗೂ ನೈತಿಕವಾಗಿ ಎಲ್ಲರೂ ಒಪ್ಪುವಂತಹ ರೀತಿಯಲ್ಲಿ ಬಹಿರಂಗವಾಗಿ ವ್ಯಕ್ತಪಡಿಸುವ ಅವಕಾಶವಿದೆ.

ಎಲ್ಲಾ ಸಂಗತಿಗಳಲ್ಲಿ ಅತಿ ಪ್ರಾಮುಖ್ಯವಾದದ್ದು ಏನೆಂದರೆ ನಮ್ಮ ಮೇಲೆ ಅಧಿಕಾರದಲ್ಲಿ ಇರುವವರಿಗೆ ವಿರುದ್ಧವಾಗಿ ನಮ್ಮ ಮನಸ್ಸಿನಲ್ಲಿ ನೋವನ್ನು

ಶೇಖರಿಸಿ ಇಟ್ಟುಕೊಳ್ಳಬಾರದು. ನೋವುಗಳು ತೊಡಕುಗಳು ಬಂದೇ ಬರುತ್ತವೆ. ಅಧಿಕಾರದಲ್ಲಿ ಇರುವವರಿಂದ ನಮಗೆ ನೋವು ಉಂಟಾಗುತ್ತದೆ. ಆದರೆ ನಾವು ಈ ನೋವನ್ನು ಅವರಿಗೆ ವಿರುದ್ಧವಾಗಿ ಇಟ್ಟುಕೊಳ್ಳಬಾರದು ಎಂದು ಹೊಸ ಒಡಂಬಡಿಕೆಯು ನಮಗೆ ಬೋಧಿಸುತ್ತದೆ.

ಆದರೆ ಓರ್ವ ಆತ್ಮೀಕ ನಾಯಕನು ಅಥವಾ ಸ್ಥಳೀಯ ಸಭಾಪಾಲಕನು ನಿಮಗೆ ನೋವು ಕೊಟ್ಟರೆ ಏನು ಮಾಡುವುದು? ಒಂದು ವೇಳೆ ನಿಮಗೆ ಅರ್ಥವಾಗದ ಒಂದು ನಿರ್ಧಾರವನ್ನು ಅವರು ಮಾಡಿರಬಹುದು ಅಥವಾ ಒಂದು ವೇಳೆ ನೀವು ಬಲು ಆಸಕ್ತಿಯಿಂದ ಸೇವೆ ಮಾಡಲು ಇಚ್ಛಿಸುತ್ತಿದ್ದ ಕ್ಷೇತ್ರದಲ್ಲಿ ಅವರು ನಿಮ್ಮ ಬದಲಾಗಿ ಇನ್ಯಾರನ್ನೋ ನಾಯಕರನ್ನಾಗಿ ಆರಿಸಿಕೊಂಡಿರಬಹುದು. ನೀವು ಅನೇಕ ವರ್ಷಗಳಿಂದ ನಂಬಿಗಸ್ಥರಾಗಿ ಸೇವೆ ಮಾಡುತ್ತಿದ್ದರೂ, ಅದನ್ನು ಅವರು ಗಮನಿಸದೆ ನಿಮ್ಮ ಹಾಗೆ ಸೇವೆ ಮಾಡದೆ ಕೇವಲ ಇತ್ತೀಚೆಗೆ ಬಂದಿರುವ ಯಾರನ್ನೋ ಆರಿಸಿಕೊಂಡಿರಬಹುದು. ಸಭೆಯಲ್ಲಿ ಇಂತಹ ಅನೇಕ ಸಂದರ್ಭಗಳು ಇರಬಹುದು. ಇವುಗಳಿಂದ ಜನರು ನೋವಿಗೆ ಒಳಗಾಗಬಹುದು. ಹೀಗಾದಾಗ ನೀವೇನು ಮಾಡಬೇಕು? ಇಲ್ಲಿ ಪೇತ್ರನು ನಾಯಕರ ವಿಷಯವಾಗಿ ಏನನ್ನು ಬರೆದಿರುತ್ತಾನೋ ಅದು ನಿಮಗೂ ಅನ್ವಯಿಸುತ್ತದೆ. ಅಧೀನರಾಗಿರಿ. ಕಷ್ಟವನ್ನು ಸಹಿಸಿಕೊಳ್ಳಿರಿ, ತಾಳ್ಮೆಯಿಂದಿರಿ. ಸಾಧ್ಯವಿದ್ದಲ್ಲಿ ನಿಮ್ಮ ಕಾಳಜಿಯನ್ನು ವ್ಯಕ್ತಪಡಿಸಿರಿ ಅಥವಾ ನಿಮ್ಮ ಅಭಿಪ್ರಾಯವನ್ನು ಸ್ವೀಕೃತವಾಗುವ ರೀತಿಯಲ್ಲಿ ಅಥವಾ ಸರಿಯಾದ ರೀತಿಯಲ್ಲಿ ಗೌರವಾನ್ವಿತವಾಗಿ ಪ್ರಕಟಿಸಿರಿ. ಒಂದು ವೇಳೆ ನಿಂದನೆ ಅಥವಾ ಅಪಾಯ ಇಲ್ಲವೇ ನಿಮ್ಮ ಹಿತಕ್ಕೆ ಹಾನಿಕರವಾದ ಏನಾದರೂ ಇದ್ದಲ್ಲಿ ಸುರಕ್ಷಿತವಾದ ಸ್ಥಳಕ್ಕೆ ಚಲಿಸಿರಿ. ನೀವೇನೇ ಮಾಡಿದರೂ ಯಾರಿಗೂ ವಿರುದ್ಧವಾಗಿ ನೋವನ್ನು ಹೃದಯದಲ್ಲಿ ಇಟ್ಟುಕೊಳ್ಳಬೇಡಿ.

ವಿಶ್ವಾಸಿಗಳು ತಮ್ಮ ಜೀವಿತದಲ್ಲಿ ನೋವನ್ನು ತೊಡಕುಗಳನ್ನು ಯಾಕೆ ಅನುಭವಿಸುತ್ತಾರೆ ಎಂಬುದಕ್ಕೆ ಮೂರು ಕಾರಣಗಳನ್ನು ಚರ್ಚಿಸೋಣ.

## ದೇವರ ವಿಷಯವಾಗಿ ನೋವು ಹೊಂದಿರುವದು

**ಆದಿಕಾಂಡ 4:3–7**

**3 ಕಾಲಾಂತರದಲ್ಲಿ ಕಾಯಿನನು ಹೊಲದ ಬೆಳೆಯಲ್ಲಿ ಕೆಲವನ್ನು ತಂದು ಯೆಹೋವನಿಗೆ ಕಾಣಿಕೆಯಾಗಿ ಸಮರ್ಪಿಸಿದನು.**

**4 ಹೇಬೆಲನು ಹಾಗೆಯೇ ತನ್ನ ಹಿಂಡಿನಿಂದ ಚೊಚ್ಚಲ ಕುರಿಗಳನ್ನು ಕಾಣಿಕೆಯಾಗಿ ತಂದು ಅವುಗಳ ಕೊಬ್ಬನ್ನು ಹೋಮಮಾಡಿದನು.**

**[5] ಯೆಹೋವನು ಹೇಬೆಲನನ್ನೂ ಅವನ ಕಾಣಿಕೆಯನ್ನೂ ಮೆಚ್ಚಿ ಕಾಯಿನನನ್ನೂ ಅವನ ಕಾಣಿಕೆಯನ್ನೂ ಮೆಚ್ಚಲಿಲ್ಲ. ಇದರಿಂದ ಕಾಯಿನನು ಬಹು ಕೋಪಗೊಂಡನು; ಅವನ ಮುಖವು ಕಳೆಗುಂದಿತು.**
**[6] ಆಗ ಯೆಹೋವನು ಅವನಿಗೆ–ಯಾಕೆ ಕೋಪಿಸಿಕೊಂಡಿ? ನಿನ್ನ ತಲೆ ಯಾಕೆ ಬಗ್ಗಿತು?**
**[7] ಒಳ್ಳೇ ಕೆಲಸ ಮಾಡಿದರೆ ನಿನ್ನ ತಲೆ ಎತ್ತಲ್ಪಡುವದಲ್ಲವೇ; ಅಲ್ಲದಿದ್ದರೆ ಪಾಪವು ನಿನ್ನನ್ನು ಹಿಡಿಯಬೇಕೆಂದು ಬಾಗಿಲಲ್ಲಿ ಹೊಂಚಿಕೊಂಡಿರುವದು; ಆದರೂ ನೀನು ಅದನ್ನು ವಶಮಾಡಿಕೊಳ್ಳಬೇಕು ಎಂದು ಹೇಳಿದನು.**

ಕಾಯಿನನು ಬಹು ಕೋಪಗೊಂಡನು; ಅವನ ಮುಖವು ಕಳೆಗುಂದಿತು. ಅವನು ಮುನಿಸಿಕೊಂಡಿದ್ದನು ಹಾಗೂ ಸಿಡುಕು ಮೋರೆ ಹಾಕಿಕೊಂಡಿದ್ದನು. ಅವನು ದೇವರ ಮೇಲೆ ಕೋಪಗೊಂಡಿದ್ದನು. ಕಾಯಿನನ ದೃಷ್ಟಿಯಲ್ಲಿ ದೇವರು ನ್ಯಾಯ ಇಲ್ಲದವನು, ಪಕ್ಷಪಾತ ಮಾಡುವವನಂತೆ ಕಾಣಿಸಿದನು. ಆದರೆ ದೇವರು ನ್ಯಾಯವಂತನೇ ಆಗಿದ್ದನು. ಹೇಬೆಲನಿಗೆ ಇದ್ದಂತೆ ಕಾಯಿನನಿಗೂ ದೇವರ ದೃಷ್ಟಿಯಲ್ಲಿ ಸರಿಯಾದದ್ದನ್ನು ಮಾಡುವ ಹಾಗೂ ದೇವರಿಂದ ಸ್ವೀಕೃತವಾಗುವ ಯಜ್ಞವನ್ನು ಅರ್ಪಿಸುವ ಅದೇ ಅವಕಾಶವಿದ್ದಿತು. ಆದರೆ ಕಾಯಿನನಿಗೆ ದೇವರು ತನ್ನ ಇಚ್ಚೆಗೆ ಸರಿಯಾಗಿ ಕಾರ್ಯ ಮಾಡಬೇಕು ಎಂಬಂತಹ ಭಾವನೆಯಿತ್ತು. ಅದು ಅಹಂಕಾರವಾಗಿತ್ತು.

ಕಾಯಿನನು ದೇವರ ಮೇಲೆ ಮುನಿಸಿಕೊಂಡಿದ್ದನು. ಆದರೂ ಕೂಡ ದೇವರು ಇಚ್ಚೈಸಿದ ರೀತಿಯಲ್ಲಿ ಆತನ ಬಳಿಗೆ ಬರಲು ಕಾಯಿನನಿಗೆ ಮನಸ್ಸಿರಲಿಲ್ಲ. ಈ ಕೋಪ ಹಾಗೂ ಅಹಂಕಾರವು ಆತನಲ್ಲಿ ಇರುವಾಗ ಪಾಪವು ಕಾಯಿನನನ್ನು ಹಿಡಿಯಲು ಕಾಯುತ್ತಿತ್ತು. ಆದರೆ ಕಾಯಿನನು ದೇವರ ದೃಷ್ಟಿಯಲ್ಲಿ ಸರಿಯಾದದ್ದನ್ನು ಮಾಡುವುದರ ಮೂಲಕ ಪಾಪದ ಮೇಲೆ ಜಯವನ್ನು ಸಾಧಿಸಬೇಕೆಂಬದೇ ದೇವರ ಬಯಕೆಯಾಗಿತ್ತು.

ಕೆಲವು ಬಾರಿ, ವಿಶ್ವಾಸಿಗಳು ದೇವರ ಮೇಲೆ ಮುನಿಸಿಕೊಳ್ಳುವದು ಉಂಟು. ಅವರ ಜೀವಿತದಲ್ಲಿ ಎದುರಾಗುವ ಎಲ್ಲಾ ಸನ್ನಿವೇಶಗಳಲ್ಲಿ ಅವರಿಗೆ, ದೇವರು ತಮ್ಮ ಕುರಿತಾಗಿ ನ್ಯಾಯವನ್ನು ಮಾಡಿಲ್ಲ, ಅಥವಾ ಪಕ್ಷಪಾತಿಯಾಗಿ ಇದ್ದಾನೆ ಎಂದೆನಿಸಬಹುದು. ನಮಗೆ ಇನ್ನೂ ಉತ್ತಮವಾದದ್ದು ಸಿಗಬೇಕಾಗಿತ್ತು ಎಂದು ಅವರು ಅಂದುಕೊಳ್ಳುವದುಂಟು. ಇತರರು ಯಾಕೆ ಆಶೀರ್ವಾದ ಹೊಂದುತ್ತಾರೆ? ಅಥವಾ ಇತರರಿಗೆ ನಮಗಿಂತ ಉತ್ತಮವಾದದ್ದು ಯಾಕೆ ದೊರಕಿದೆ? ಎಂಬ ಸಂಗತಿಗಳನ್ನು ಅವರಿಗೆ ಜೀರ್ಣಿಸಿಕೊಳ್ಳಲು ಆಗುವದಿಲ್ಲ. ಇಂಥವರು ದೇವರು

ತಮ್ಮ ಇಚ್ಚೆಗೆ ಸರಿಯಾಗಿ ಕಾರ್ಯ ಮಾಡಬೇಕೆಂದು ಬಯಸುತ್ತಾರೆ. ಇದು ಆತ್ಮೀಕ ಅಹಂಕಾರವಾಗಿದೆ. ನಾವು ದೇವರೊಂದಿಗೆ ಮುನಿಸಿಕೊಳ್ಳುವಂತೆ ಮಾಡುವದಕ್ಕೆ ಈ ಅಹಂಕಾರ,ಗರ್ವಗಳೇ ಕಾರಣವಾಗಿದೆ. ದೇವರ ಮೇಲೆ ಕೋಪಗೊಳ್ಳುವದು ಒಂದು ಅಪಾಯಕಾರಿ ಸನ್ನಿವೇಶವಾಗಿರುತ್ತದೆ. ಆ ಸಂದರ್ಭದಲ್ಲಿ ಪಾಪವು ನಮ್ಮ ಮೇಲೆ ದೊರೆತನ ಸಾಧಿಸಲು ಕಾಯುತ್ತಿರುತ್ತದೆ. ಈ ಕೋಪವು ಪಾಪಕ್ಕೆ ಒಂದು ಪ್ರವೇಶ ದ್ವಾರವಾಗಿ ಮಾರ್ಪಡುತ್ತದೆ. ಇದರ ಮೂಲಕ ಸೈತಾನನು ಒಳಬಂದು ವಿಶ್ವಾಸಿಯ ಜೀವಿತದಲ್ಲಿರುವ ಬಲಹೀನ ಕ್ಷೇತ್ರಗಳನ್ನು ನಿಯಂತ್ರಿಸುವಂತೆ ಮಾಡುತ್ತದೆ.

ಇದಕ್ಕಿರುವ ಕೇವಲ ಒಂದೇ ಒಂದು ಔಷಧಿ ಏನಂದರೆ ಪಶ್ಚಾತ್ತಾಪ ಪಡುವುದು. ಅಂದರೆ ದೇವರ ಬಳಿಗೆ ಬಂದು ಆತನು ಯಾವಾಗಲೂ ಒಳ್ಳೆಯವನು, ನೀತಿವಂತನು, ನ್ಯಾಯ ಸ್ವರೂಪಿಯೂ ಆಗಿದ್ದಾನೆ ಎಂಬುದನ್ನು ಒಪ್ಪಿಕೊಳ್ಳುವುದು. ಮಾತ್ರವಲ್ಲ ದೇವರ ಬಗ್ಗೆ ತಪ್ಪಾಗಿ ತಿಳಿದುಕೊಂಡವರು ನಾವೇ ಆಗಿದ್ದೇವೆ, ಹಾಗೂ ನಮ್ಮ ಅಹಂಕಾರದ ನಿಮಿತ್ತ ನಮ್ಮದೇ ಆದ ರೀತಿಯಲ್ಲಿ ಸಂಗತಿಗಳು ಆಗಬೇಕೆಂದು ಬಯಸಿದವರು ನಾವೇ ಎಂಬುದನ್ನು ಒಪ್ಪಿಕೊಳ್ಳುವುದಾಗಿದೆ.

## ಪ್ರವಾದಿಯು ತಾನು ಕೈಬಿಡಲ್ಪಟ್ಟಿದ್ದೇನೆ ಎಂದು ಭಾವಿಸಿದಾಗ

**ಮತ್ತಾಯನು 11:2-6**

**2 ಯೋಹಾನನು ಕ್ರಿಸ್ತನ ಕಾರ್ಯಗಳ ಸುದ್ದಿಯನ್ನು ಸೆರೆಮನೆಯಲ್ಲಿ ಕೇಳಿ ಆತನ ಬಳಿಗೆ ಶಿಷ್ಯರನ್ನು ಕಳುಹಿಸಿ—**

**3 ಬರಬೇಕಾದವನು ನೀನೋ, ನಾವು ಬೇರೊಬ್ಬನ ದಾರಿಯನ್ನು ನೋಡಬೇಕೋ ಎಂದು ಕೇಳಿಸಿದನು.**

**4, 5 ಆತನು ಅವರಿಗೆ ಪ್ರತ್ಯುತ್ತರವಾಗಿ—ಕುರುಡರಿಗೆ ಕಣ್ಣು ಬರುತ್ತವೆ; ಕುಂಟರಿಗೆ ಕಾಲು ಬರುತ್ತವೆ; ಕುಷ್ಠರೋಗಿಗಳು ಶುದ್ಧರಾಗುತ್ತಾರೆ; ಕಿವುಡರಿಗೆ ಕಿವಿ ಬರುತ್ತವೆ; ಸತ್ತವರು ಜೀವವನ್ನು ಹೊಂದುತ್ತಾರೆ; ಬಡವರಿಗೆ ಸುವಾರ್ತೆ ಸಾರಲ್ಪಡುತ್ತದೆ; ನೀವು ಹೋಗಿ ಕಂಡುಕೇಳುವವುಗಳನ್ನು ಯೋಹಾನನಿಗೆ ತಿಳಿಸಿರಿ.**

**6 ನನ್ನ ವಿಷಯದಲ್ಲಿ ಸಂಶಯಪಡದವನೇ** (ಗ್ರೀಕ್ ಪದ ಸ್ಕ್ಯಾಂಡಲನ್) **ಧನ್ಯನು ಎಂದು ಹೇಳಿದನು.**

ಈ ದೃಶ್ಯವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಿ. ಯೇಸುವನ್ನು ದೈವಿಕವಾಗಿ ಗುರುತಿಸಿದವನು ಹಾಗೂ ಆತನನ್ನು ಲೋಕಕ್ಕೆ ಪರಿಚಯಿಸಿದವನು ಸ್ನಾನಿಕನಾದ ಯೋಹಾನನೇ ಆಗಿದ್ದನು. ''ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು

ನಿವಾರಣೆ ಮಾಡುವವನು'' (ಯೋಹಾನ 1:29) ಎಂಬುದಾಗಿ ಘೋಷಿಸಿದವನು. ಯೇಸುವೇ ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಕೊಡುವಾತನು ಎಂಬುದನ್ನು ಪ್ರಕಟಿಸಿದವನು ಯೋಹಾನನು. ಆದರೆ ಈಗ ಯೋಹಾನನು ಸೆರೆಮನೆಯಲ್ಲಿ ಇದ್ದಾನೆ ಯೇಸು ತನ್ನ ಸೇವೆಯನ್ನು ಮುಂದುವರಿಸುತ್ತಿದ್ದಾನೆ. ಆದರೆ ಯೋಹಾನನನ್ನು ಸೆರೆಮನೆಯಿಂದ ಬಿಡಿಸುವ ಕುರಿತಾಗಿ ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ಯೋಹಾನನ ಮನಸ್ಸಿನಲ್ಲಿ ಏನೇನು ಆಗುತ್ತಿದ್ದಿರಬಹುದು ಎಂಬುದನ್ನು ಆಲೋಚಿಸಿ–''ಯೇಸುವು ನಿಜವಾಗಿಯೂ ಮೆಸ್ಸೀಯನು ಆಗಿದಿದ್ದರೆ ನನ್ನನ್ನು ಈ ಸೆರೆಮನೆಯಿಂದ ಖಂಡಿತವಾಗಿಯೂ ಬಿಡಿಸುತ್ತಿದ್ದನು. ಆದರೆ ಈ ಮನುಷ್ಯನು ಏನನ್ನೂ ಮಾಡುತ್ತಿಲ್ಲ. ಈತನು ನಿಜವಾಗಿಯೂ ಮೆಸ್ಸೀಯನೋ?'' ಆದುದರಿಂದ ಯೋಹಾನನು ಈ ಸಂಗತಿಯನ್ನು ತಿಳಿದುಕೊಳ್ಳುವುದಕ್ಕಾಗಿ ತನ್ನ ಶಿಷ್ಯರನ್ನು ಕಳುಹಿಸುತ್ತಾನೆ. ತನ್ನ ವಿಷಯವಾಗಿ (ಸಂಶಯ ಪಟ್ಟು) ನೋವುಪಟ್ಟುಕೊಳ್ಳಬಾರದು ಎಂದು ಹೇಳಿ ಯೋಹಾನನನ್ನು ಉತ್ತೇಜಿಸುತ್ತಾ, ಯೇಸುವು ತನ್ನ ಪ್ರತಿಕ್ರಿಯೆಯನ್ನು ತೋರಿಸುತ್ತಾನೆ. ಇದನ್ನು ಯೋಹಾನನು ಅರ್ಥಮಾಡಿಕೊಳ್ಳುವಂತೆ ಆತನ ಸಂದರ್ಭಕ್ಕೆ ಯೇಸು ಹೀಗೆ ಹೇಳಿದ್ದು–''ಯೋಹಾನನೇ, ನೀನು ಸೆರೆಮನೆಯಲ್ಲಿರುವದರಿಂದ ನಾನು ಕೈಬಿಡಲ್ಪಟ್ಟಿದ್ದೇನೆ ಎಂದು ನಿನಗೆ ಅನಿಸುತ್ತದೆ ಎಂಬುದು ನನಗೆ ಗೊತ್ತು, ಆದರೆ ಈ ಸಂಶಯದಿಂದ ಕೂಡಿದ ನೋವು ನಿನ್ನ ಹೃದಯವನ್ನು ಆಳದಿರಲಿ.''

ನಮಗೆ ಎಂದಾದರೂ ದೇವರು ನಮ್ಮನ್ನು ''ಕೈ ಬಿಟ್ಟಿದ್ದಾನೆ'' ಎಂದು ಅನಿಸುವಾಗ ಒಂದು ವಿಷಯವನ್ನು ನಾವು ತಿಳಿದುಕೊಳ್ಳಬೇಕು. ಅದೇನೆಂದರೆ ದೇವರು ಯಾರನ್ನು ಎಂದಿಗೂ ಕೈ ಬಿಡುವುದಿಲ್ಲ. ಮುಖ್ಯವಾಗಿ ದೇವರ ಕುರಿತಾದ ಈ ವಿಧವಾದ ಸಂಶಯವೂ ಅಡ್ಡಿಯೂ ನಿಮ್ಮ ಹೃದಯದಲ್ಲಿ ಎಂದೂ ಪ್ರವೇಶಿಸದಿರಲಿ. ಪ್ರತಿಯೊಂದು ಸನ್ನಿವೇಶದಲ್ಲಿ ಏನು ಮಾಡಬೇಕು ಎಂದು ಆತನಿಗೆ ಗೊತ್ತಿದೆ.

## ಯೇಸುಕ್ರಿಸ್ತನ ನಿಮಿತ್ತವಾಗಿ ಕೋಪಗೊಳ್ಳುವುದು: ಮುಗ್ಗರಿಸುವ ಬಂಡೆ

ಯೆಶಾಯನು ಯೇಸುಕ್ರಿಸ್ತನ ಕುರಿತಾಗಿ ಆತನು ಎಡವುವ ಕಲ್ಲೂ, ಮುಗ್ಗರಿಸುವ ಬಂಡೆಯೂ ಆಗಿದ್ದಾನೆ ಎಂದು ಪ್ರವಾದನೆ ಹೇಳುತ್ತಾನೆ.

**ಯೆಶಾಯ 8:13–15**

**13 ಸೇನಾಧೀಶ್ವರನಾದ ಯೆಹೋವನನ್ನೇ ಪ್ರತಿಷ್ಠೆಪಡಿಸಿರಿ; ಆತನಿಗೇ ಹೆದರಿಕೊಳ್ಳಿರಿ, ನಡುಗಿರಿ.**
**14 ಆತನು ಆಶ್ರಯವಾಗುವನು; ಆದರೆ ಇಸ್ರಾಯೇಲಿನ ಎರಡು ಮನೆತನಕ್ಕೆ ಎಡವುವ ಕಲ್ಲೂ ಮುಗ್ಗರಿಸುವ ಬಂಡೆಯೂ ಯೆರೂಸಲೇಮಿನ ನಿವಾಸಿಗಳಿಗೆ ಬಲೆಯೂ ಬೋನೂ ಆಗುವನು.**
**15 ಅವರಲ್ಲಿ ಅನೇಕರು ಎಡವಿ ಬಿದ್ದು ಭಂಗವಾಗುವರು, ಬೋನಿಗೆ ಸಿಕ್ಕಿ ವಶವಾಗುವರು.**

**ಯೆಶಾಯ 28:16**

**ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ಇಗೋ, ಪರೀಕ್ಷಿತವಾಗಿಯೂ ಮಾನ್ಯವಾಗಿಯೂ ಇರುವ ಮೂಲೆಗಲ್ಲನ್ನು ಚೀಯೋನಿನಲ್ಲಿ ಸ್ಥಿರವಾದ ಅಸ್ತಿವಾರವನ್ನಾಗಿ ಇಡುತ್ತೇನೆ; ಭರವಸವಿಡುವವನು ಆತುರಪಡನು.**

ಬಹಳ ಕುತೂಹಲಕಾರಿಯಾದ ವಿಷಯವೇನೆಂದರೆ, ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ಪೌಲನೂ, ಹಾಗೂ ಪೇತ್ರನ ಒಂದನೇ ಪತ್ರಿಕೆಯಲ್ಲಿ ಅಪೊಸ್ತಲನಾದ ಪೇತ್ರನೂ, ಯೇಸುಕ್ರಿಸ್ತನ ಕುರಿತಾದ ಯೆಶಾಯನ ಪ್ರವಾದನೆಯ ಬಗ್ಗೆ ತಿಳಿಸುತ್ತಾರೆ.

ಯೇಸುವು ಬಂದಾಗ ಯೆಹೂದ್ಯ ಜನರು ಆತನನ್ನು ತಿರಸ್ಕರಿಸಿದರು. ಯಾಕೆಂದರೆ ಆತನು ಅವರ ಭಾವನೆಗಳಿಗೆ, ಅವರ ನಿರೀಕ್ಷೆಗೆ ತಕ್ಕಂತೆ ಇರುವ ಮೆಸ್ಸೀಯನಾಗಿರಲಿಲ್ಲ. ಅಪೊಸ್ತಲನಾದ ಪೌಲನು ಯೆಶಾಯನ ಪ್ರವಾದನೆಯು ನೆರವೇರಿರುವದರ ಬಗ್ಗೆ ರೋಮಾಪುರದವರಿಗೆ 9:30–33 ರಲ್ಲಿ ಹೇಳುತ್ತಾನೆ. ಇಸ್ರಾಯೇಲ್ಯರು ನಂಬಿಕೆಯ ಮೂಲಕವಾಗಿ ನೀತಿಯನ್ನು ಸ್ವೀಕರಿಸುವುದರಲ್ಲಿ ತಪ್ಪಿ ಹೋಗುವುದರ ಮೂಲಕ ಅವರು ಯೇಸುಕ್ರಿಸ್ತನನ್ನು ಎಡವಿದರು, ಮಾತ್ರವಲ್ಲದೆ ಅದರ ಬದಲಾಗಿ ಅವರು ಧರ್ಮಶಾಸ್ತ್ರದ ಮೂಲಕವಾಗಿ ತಮ್ಮದೇ ಆದಂತಹ ನೀತಿಯನ್ನು ಸ್ಥಾಪಿಸುವುದನ್ನು ಪ್ರಯತ್ನಿಸಿದರು.

ಅಪೊಸ್ತಲನಾದ ಪೇತ್ರನು ಹೀಗೆ ಬರೆಯುತ್ತಾನೆ:

**1 ಪೇತ್ರನು 2:6–8**

**6 ಇಗೋ, ಚೀಯೋನಿನಲ್ಲಿ ಮೂಲೆಗಲ್ಲನ್ನು ಇಡುತ್ತೇನೆ. ಅದು ಆಯಲ್ಪಟ್ಟದ್ದು, ಮಾನ್ಯವಾದದ್ದು; ಅದರ ಮೇಲೆ ನಂಬಿಕೆಯಿಡುವವನು ಆಶಾಭಂಗಪಡುವದೇ ಇಲ್ಲ ಎಂದು ಶಾಸ್ತ್ರದಲ್ಲಿ ಬರೆದಿದೆ.**
**7 ಆದುದರಿಂದ ನಂಬುವವರಾದ ನಿಮಗೇ ಈ ಮಾನವುಂಟು. ನಂಬದೆಯಿರುವವರಿಗೋ— ಮನೆಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು ಎಂತಲೂ**
**8 ಅದು ಎಡವುವ ಕಲ್ಲು ಮುಗ್ಗರಿಸುವ ಬಂಡೆ ಎಂತಲೂ ಬರೆದಿರುವ ಮಾತು ಸರಿಬೀಳುತ್ತದೆ. ಅವರು ದೇವರ ವಾಕ್ಯವನ್ನು ನಂಬಲೊಲ್ಲದೆ ಇರುವದರಿಂದ ಆ ಕಲ್ಲನ್ನು ಎಡವಿ ಬೀಳುತ್ತಾರೆ; ಅದಕ್ಕಾಗಿಯೇ ಅವರು ನೇಮಕವಾದರು.**

ನಂಬುವವರಾದ ನಮಗೆ ಯೇಸುಕ್ರಿಸ್ತನು ಮುಖ್ಯವಾದ ಮೂಲೆಗಲ್ಲು ಆಗಿದ್ದಾನೆ, ಹಾಗೂ ಆತನು ನಮಗೆ ಅಮೂಲ್ಯನು. ಆದರೂ ಆತನು ಕೆಲವರಿಗೆ ಎಡವುವ ಕಲ್ಲೂ, ಮುಗ್ಗರಿಸುವ ಬಂಡೆಯೂ, ಆಗಿದ್ದಾನೆ.

ಯೇಸು ಕ್ರಿಸ್ತನು ಕೆಲವರಿಗೆ ತೊಡಕು ಹಾಗೂ ಅಡ್ಡಿಯಾಗಿರುವದರಿಂದ ಅವರು ಆ ಕೋಪವನ್ನು ಆತನ ಸಭೆಯಾದ, ಆತನ ಜನರಾದ ನಮ್ಮ ಮೇಲೆ ತೀರಿಸುತ್ತಾರೆ. ನೀವು ಯೇಸು ಕ್ರಿಸ್ತನ ಮೇಲೆ ನಂಬಿಕೆ ಇಡುವಾಗ ಜನರು ನಿಮಗೆ ನೋವುಂಟುಮಾಡಿದರೆ ನೀವು ಆಶ್ಚರ್ಯ ಪಡಬೇಡಿ. ಅಪೊಸ್ತಲನಾದ ಪೌಲನು ಹೀಗೆ ಹೇಳಿರುತ್ತಾನೆ: *''ರಕ್ಷಣಾಮಾರ್ಗದಲ್ಲಿ ಇರುವವರಲ್ಲಿಯೂ ನಾಶನಮಾರ್ಗದಲ್ಲಿ ಇರುವವರಲ್ಲಿಯೂ ನಾವು ದೇವರ ಮುಂದೆ ಕ್ರಿಸ್ತನ ಪರಿಮಳವಾಗಿದ್ದೇವೆ. ನಾವು ನಾಶನಮಾರ್ಗದಲ್ಲಿರುವವರಿಗೆ ಮರಣದಿಂದ ಹುಟ್ಟಿ ಮರಣವನ್ನು ಹುಟ್ಟಿಸುವ ವಾಸನೆಯಾಗಿಯೂ ರಕ್ಷಣಾಮಾರ್ಗದಲ್ಲಿರುವವರಿಗೆ ಜೀವದಿಂದ ಹುಟ್ಟಿ ಜೀವವನ್ನು ಹುಟ್ಟಿಸುವ ವಾಸನೆಯಾಗಿಯೂ ಇದ್ದೇವೆ ...''* (2 ಕೊರಿಂಥದವರಿಗೆ 2:15,16).

ತಾನು ಶಿಲುಬೆಗೆ ಹಾಕಲ್ಪಡುವ ಸಂದರ್ಭದಲ್ಲಿ ತನ್ನ ಶಿಷ್ಯರು ಎಡವುವರು ಎಂಬುದನ್ನು ಯೇಸುವು ಮುಂದಾಗಿ ಹೇಳಿದನು. ಮತ್ತಾಯನು 26:31,33ರಲ್ಲಿ *''ಆಗ ಯೇಸು, ಅವರಿಗೆ, ''ನೀವೆಲ್ಲರೂ ಈ ರಾತ್ರಿ ನನ್ನ ವಿಷಯದಲ್ಲಿ ದಿಗಿಲುಪಟ್ಟು ಹಿಂಜರಿಯುವಿರಿ* (ಗ್ರೀಕ್ ಪದ ಸ್ಕ್ಯಾಂಡಲನ್). *ಕುರುಬನನ್ನು ಹೊಡೆಯುವೆನು; ಹಿಂಡಿನ ಕುರಿಗಳು ಚದರಿಹೋಗುವವು. ಪೇತ್ರನು ಆತನಿಗೆ ಉತ್ತರಿಸಿ ಹೇಳಿದ್ದೇನೆಂದರೆ–ಎಲ್ಲರೂ ನಿನ್ನ ವಿಷಯದಲ್ಲಿ ದಿಗಿಲುಪಟ್ಟು ಹಿಂಜರಿದರೂ* (ಗ್ರೀಕ್ ಪದ ಸ್ಕ್ಯಾಂಡಲನ್), *ನಾನು ನಿನ್ನ ವಿಷಯವಾಗಿ ಎಂದಿಗೂ ಹಿಂಜರಿಯುವದಿಲ್ಲ.''* ಪೇತ್ರನು ಧೀರನಾಗಿರಲು ಪ್ರಯತ್ನಿಸಿದರೂ ಆತನೂ ಎಡವಿದನು.

ಯೇಸು ತನ್ನ ಶಿಷ್ಯರಿಗೆ ಮುಂದೆ ಬರಲಿರುವ ಅಡ್ಡಿ ತೊಡಕುಗಳ ಬಗ್ಗೆ ಅನೇಕ ಕಡೆಗಳಲ್ಲಿ ಮುಂತಿಳಿಸಿದನು. ಯೋಹಾನ 16:1,2 ನ್ನು ಗಮನಿಸಿ: *''ನೀವು ಧೈರ್ಯಗೆಟ್ಟು ಹಿಂಜರಿಯಬಾರದೆಂದು* (ಗ್ರೀಕ್ ಪದ ಸ್ಕ್ಯಾಂಡಲನ್) *ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ನಿಮಗೆ ಬಹಿಷ್ಕಾರ ಹಾಕುವರು; ಅದಲ್ಲದೆ ನಿಮ್ಮನ್ನು ಕೊಲ್ಲುವವನು ತಾನು ದೇವರಿಗೆ ಯಜ್ಞವನ್ನು ಮಾಡಿದ್ದೇನೆಂದು ನೆನಸುವ ಕಾಲ ಬರುತ್ತದೆ.''*

ಆದುದರಿಂದ, ಯೇಸು ಕ್ರಿಸ್ತನಲ್ಲಿ ನಂಬಿಕೆ ಇಡುವ ವಿಶ್ವಾಸಿಗಳು ಆ ನಂಬಿಕೆಯ ನಿಮಿತ್ತವಾಗಿ ನೋವನ್ನು ಎದುರಿಸುವರು.

## ದೇವರ ವಾಕ್ಯದ ನಿಮಿತ್ತವಾಗಿಯೂ ಆತ್ಮನ ನಿಮಿತ್ತವಾಗಿಯೂ ಎಡವಿ ಬೀಳುವುದು.

ಇಲ್ಲಿ ಯೆಶಾಯನ ಇನ್ನೊಂದು ಪ್ರವಾದನೆಯು ಹೀಗೆ ಹೇಳುತ್ತದೆ.

**ಯೆಶಾಯ 28:9-13**

**9 ಇವರು ಹರಟಿಕೊಳ್ಳುವದೇನೆಂದರೆ—ಇವನು ಯಾರಿಗೆ ಜ್ಞಾನವನ್ನು ಬೋಧಿಸುತ್ತಾನೆ? ಇವನು ಯಾರಿಗೆ ಯೆಹೋವನ ಮಾತನ್ನು ತಿಳಿಯಪಡಿಸುತ್ತಾನೆ? ಮೊಲೆ ಬಿಟ್ಟ ಕೂಸುಗಳಿಗೋ? ಎದೆಬಿಟ್ಟ ಮಕ್ಕಳಿಗೋ?**

**10 ಆಜ್ಞೆಯ ಮೇಲೆ ಆಜ್ಞೆ, ಆಜ್ಞೆಯ ಮೇಲೆ ಆಜ್ಞೆ, ಸೂತ್ರದ ಮೇಲೆ ಸೂತ್ರ, ಸೂತ್ರದ ಮೇಲೆ ಸೂತ್ರ, ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ ಪ್ರಕಟಿಸುತ್ತಾನಲ್ಲಾ ಇತ್ಯಾದಿ.**

**11 ಹೌದು, ತೊದಲು ಮಾತಿನವರು, ಅನ್ಯಭಾಷಿಗಳು, ಇವರ ಮೂಲಕವಾಗಿಯೇ ಯೆಹೋವನು ಈ ಜನರ ಮಧ್ಯದಲ್ಲಿ ಮಾತಾಡುವನು.**

**12 ಆತನು ಮೊದಲು—ಇದೇ ನಿಮಗೆ ಆವಶ್ಯಕವಾದ ವಿಶ್ರಾಂತಿ, ಬಳಲಿದವರನ್ನು ವಿಶ್ರಮಗೊಳಿಸಿರಿ, ನಿಮಗೆ ಅನುಕೂಲವಾದ ಉಪಶಮನವು ಇದೇ ಎಂದು ಹೇಳಿದಾಗ ಇವರು ಕೇಳಲೊಲ್ಲದೆ ಹೋದರು.**

**13 ಹೀಗಿರಲು ಯೆಹೋವನ ಮಾತು ಆಜ್ಞೆಯ ಮೇಲೆ ಆಜ್ಞೆ, ಆಜ್ಞೆಯ ಮೇಲೆ ಆಜ್ಞೆ, ಸೂತ್ರದ ಮೇಲೆ ಸೂತ್ರ, ಸೂತ್ರದ ಮೇಲೆ ಸೂತ್ರ, ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ ಎಂಬದಾಗಿ ಇವರಿಗೆ ಪರಿಣಮಿಸುವದು; ಇವರು ನಡೆದು ಹಿಂದೆಬಿದ್ದು ಭಂಗಪಡುವರು, ಬೋನಿಗೆ ಸಿಕ್ಕಿ ವಶವಾಗುವರು.**

ಕೆಲವು ಬಾರಿ ಜನರು ವಾಕ್ಯದ ನಿಮಿತ್ತವಾಗಿ ದೇವರು ತಿಳಿಸುವ ಸತ್ಯದ ವಿಷಯವಾಗಿ ಎಡವುವರು. ದೇವರ ವಾಕ್ಯವು ನಮ್ಮನ್ನು ಕಟ್ಟುವುದಕ್ಕಾಗಿಯೂ, ನಮಗೆ ಜ್ಞಾನ, ವಿವೇಕಗಳನ್ನು ನೀಡುವುದಕ್ಕಾಗಿಯೂ ಇದೆ. ಯೆಶಾಯ 28:11,12 ವಚನವು ಪವಿತ್ರಾತ್ಮನ ಕಾರ್ಯದ ಬಗ್ಗೆಯೂ, ಹಾಗೂ ಅನ್ಯ ಭಾಷೆಗಳಲ್ಲಿ ಮಾತನಾಡುವ ಕುರಿತಾಗಿಯೂ ಬರೆದದೆ. ಇದನ್ನು ಅಪೊಸ್ತಲನಾದ ಪೌಲನು 1 ಕೊರಿಂಥದವರಿಗೆ 14:21ರಲ್ಲಿ ಹೇಳಿದ್ದಾನೆ. ಆದರೂ ಕೆಲವು ಜನರು ದೇವರ ವಾಕ್ಯವನ್ನು ಅಥವಾ ಆತ್ಮನನ್ನು ಸ್ವೀಕರಿಸಲು ಅಸಮರ್ಥರಾಗುವದರಿಂದ ಈ ಸತ್ಯವನ್ನು ತಿರಸ್ಕರಿಸುತ್ತಾರೆ. ಅವರು ಎಡವುತ್ತಾರೆ, ಬೀಳುತ್ತಾರೆ ಹಾಗೂ ಎಡವಿ ಮುಗ್ಗರಿಸಿ ಬೋನಿಗೆ ಸಿಕ್ಕಿಕೊಳ್ಳುತ್ತಾರೆ.

ಇದು ಓರ್ವ ವಿಶ್ವಾಸಿಯ ಜೀವಿತದಲ್ಲಿ ಮುಂದೆ ತಿಳಿಸಿದ ವಿಧಾನಗಳಲ್ಲಿ ಕಂಡುಬರುತ್ತದೆ.

## *ದೇವರು ನಿಮ್ಮ ತಿಳುವಳಿಕೆಯನ್ನು ಹೆಚ್ಚಿಸಿದಾಗ*

ಕೆಲವು ಬಾರಿ, ವಿಶ್ವಾಸಿಗಳಾಗಿರುವ ನೀವು ವಾಕ್ಯದ ನಿಮಿತ್ತವಾಗಿಯೂ ಹಾಗೂ ಆತ್ಮದ ನಿಮಿತ್ತವಾಗಿಯೂ ಎಡವುವವರಾಗಿದ್ದೀರಿ. ಯಾಕೆಂದರೆ ಅದು ನೀವು ಇಚ್ಛಿಸಿದಂತೆ ಇರುವುದಿಲ್ಲ. ದೇವರು ಹೃದಯವನ್ನು ತೆರೆಯುವುದಕ್ಕಾಗಿ ಮನಸ್ಸನ್ನು ನೋಯಿಸುತ್ತಾನೆ. ಆದುದರಿಂದ ನೀವು, ನನಗೆ ದೇವರ ವಾಕ್ಯದ ಜ್ಞಾನವು ಸರಿಯಾಗಿದೆ, ಪವಿತ್ರಾತ್ಮನಲ್ಲಿ ಅದ್ಭುತವಾಗಿ ಚಲಿಸುತ್ತಿದ್ದೇನೆ ಎಂದು ಅಂದುಕೊಳ್ಳುತ್ತಿರುವಾಗಲೇ ಯಾರೋ ಒಬ್ಬರ ಮೂಲಕವಾಗಿ ನೀವು ಇಷ್ಟರವರೆಗೆ ಊಹಿಸದಿದ್ದ ರೀತಿಯಲ್ಲಿ ವಾಕ್ಯವೂ, ಆತ್ಮನ ಕಾರ್ಯಗಳೂ ವ್ಯಕ್ತವಾಗುತ್ತವೆ. ಅದು ನಿಮ್ಮ ತಿಳುವಳಿಕೆಯನ್ನು ಅಲುಗಾಡಿಸಿ ಬುಡಮೇಲು ಮಾಡುತ್ತದೆ. ಇಲ್ಲಿ ನಿಮಗೆ ಮಾಡಲು ಒಂದು ಆಯ್ಕೆ ಇದೆ. ಇದರ ಮೂಲಕ ನಿಮಗೆ ನೋವು ಉಂಟಾಗಿ ಇದನ್ನು ನೀವು ಸಂಪೂರ್ಣವಾಗಿ ತಿರಸ್ಕರಿಸಬಹುದು ಅಥವಾ ದೇವರೇ ನನಗೆ ನಿನ್ನ ಕೃಪೆಯನ್ನು ದಯಪಾಲಿಸಿ ಇದರಲ್ಲಿ ನಾನು ಬೆಳೆದು ನನ್ನ ಆತ್ಮೀಯ ತಿಳುವಳಿಕೆಯೂ, ಆತ್ಮಿಕ ಕ್ಷಮತೆಯೂ ಹಾಗೂ ಆತ್ಮಿಕ ಅನುಭವವೂ ಹೆಚ್ಚಾಗಲಿ ಎಂದು ಪ್ರಾರ್ಥಿಸಬಹುದು. [**ಗಮನಿಸಿ:** ನಾವಿಲ್ಲಿ ತಪ್ಪಾದ ಬೋಧನೆಯನ್ನು ಕೇಳುವುದರ ಕುರಿತಾಗಿ ಹೇಳುತ್ತಿಲ್ಲ. ಯಾವುದೇ ತಪ್ಪಾದ ಬೋಧನೆ ಅಥವಾ ಸಂಪ್ರದಾಯ ವಿರುದ್ಧವಾಗಿ ಹೇಳುವುದು. ಇದು ದೇವರಿಂದಲೇ ಬಂದ ಬೋಧನೆಯಾಗಿದೆ ಎಂದು ನಾವು ತಿಳಿಸುತ್ತೇವೆ. ಆದರೆ ಈ ತರದ ಬೋಧನೆಯನ್ನು ಇಷ್ಟರವರೆಗೂ ನೀವು ಕೇಳಿರಲಿಕ್ಕಿಲ್ಲ .]

ನಿಮಗೆ ಯಾವುದು ಅರ್ಥವಾಗಲಿಲ್ಲವೋ ಅದರ ವಿರುದ್ಧವಾಗಿ ಹೋರಾಡಲು ಆರಂಭಿಸುವದು ತಪ್ಪಾಗಿದೆ. ಎಷ್ಟೋಬಾರಿ ಕ್ರೈಸ್ತ ಜೀವಿತದಲ್ಲಿ ವಿಶ್ವಾಸಿಗಳು ಒಬ್ಬರ ಮೇಲೊಬ್ಬರು ದೋಷಾರೋಪಣೆ ಮಾಡುತ್ತಾ ಕೆಸರೆರಚಾಟ ಮಾಡುವುದನ್ನು ನೋಡುತ್ತೇವೆ. ಯಾಕೆಂದರೆ, ಅಂಥವರು ಇತರರ ಜೀವಿತದಲ್ಲಿ ದೇವರವಾಕ್ಯದ ಹಾಗೂ ದೇವರ ಆತ್ಮನ ಕಾರ್ಯವನ್ನು ಗಮನಿಸದೆ ಎಡವುತ್ತಾರೆ. ಅವರು ಪ್ರಪಂಚದ ಅಭಿವ್ಯಕ್ತಿ ಮತ್ತು ಆತ್ಮವನ್ನು ಸ್ವೀಕರಿಸಲು ಸಾಧ್ಯವಾಗುವುದಿಲ್ಲ

ಮತ್ತು ಆದ್ದರಿಂದ ಮನನೊಂದಿದ್ದಾರೆ ಮತ್ತು ನಂತರ ಅವರು ಅರ್ಥಮಾಡಿಕೊಳ್ಳದ ಏನನ್ನಾದರೂ ಹರಿದು ಹಾಕುತ್ತಾರೆ.

## *ನಿಮ್ಮ ಜೀವಿತದಲ್ಲಿ ನಡೆಯುವ ದೇವರ ಕಾರ್ಯವನ್ನು ಇತರರು ತಪ್ಪಾಗಿ ಅರ್ಥಮಾಡಿಕೊಂಡಾಗ*

ಒಬ್ಬ ವಿಶ್ವಾಸಿಯು ದೇವರ ವಾಕ್ಯದ ಮತ್ತು ಆತ್ಮನ ನಿಮಿತ್ತವಾಗಿ ನೋವನ್ನು ಅನುಭವಿಸಬಹುದಾದ ಎರಡನೆಯ ವಿಧ ಯಾವುದೆಂದರೆ, ಅದು ದೇವರು ನಿಮ್ಮ ಜೀವಿತದಲ್ಲಿ ಮಾಡುವ ಕಾರ್ಯವನ್ನು ಅರ್ಥ ಮಾಡಿಕೊಳ್ಳದೆ ಇರುವ ಜನರ ಮೂಲಕ. ಇಂತಹ ಜನರು ನಿಮ್ಮನ್ನು ಎದುರಿಸುತ್ತಾರೆ. ಕೆಲವು ಬಾರಿ ಜನರು ನಿಮ್ಮ ಜೀವಿತದಲ್ಲಿ ದೇವರ ವಾಕ್ಯದ, ದೇವರ ಆತ್ಮನ ಕಾರ್ಯವನ್ನು ತಿಳಿಯಲು ಅಸಮರ್ಥರಾದಾಗ ನಿಮ್ಮನ್ನು ಎದುರಿಸುತ್ತಾರೆ, ನಿಮಗೆ ನೋವುಂಟು ಮಾಡುತ್ತಾರೆ, ನಿಮ್ಮನ್ನು ಹಾಸ್ಯ ಮಾಡುತ್ತಾರೆ, ಟೀಕೆ ಮಾಡುತ್ತಾರೆ, ಹಾಗೂ ನಿಮಗೆ ಕೆಟ್ಟ ಹೆಸರಿಟ್ಟು ಕರೆಯುತ್ತಾರೆ.

ಯೇಸುವು ಇದನ್ನು ಬಿತ್ತುವವನ ಸಾಮ್ಯದಲ್ಲಿ ಬಿತ್ತಿದ ಬೀಜವು ಬಂಡೆಮೇಲೆ ಬೀಳುವುದರ ಕುರಿತಾಗಿ ಹೇಳುವುದರ ಮೂಲಕ ನಮಗೆ ಉದಾಹರಣೆ ನೀಡುತ್ತಾನೆ. ಅಂದರೆ ದೇವರ ವಾಕ್ಯದ ನಿಮಿತ್ತವಾಗಿ ಒಬ್ಬ ವ್ಯಕ್ತಿಗೆ ಹಿಂಸೆಯು ಬರುವಾಗ ಅವನು ಎಡವಿ ಬೀಳುತ್ತಾನೆ.

**ಮತ್ತಾಯ 13:21**
**ತನಗೆ ಬೇರಿಲ್ಲದ ಕಾರಣ ಇವನು ಸ್ವಲ್ಪ ಕಾಲ ಮಾತ್ರವೇ ಇದ್ದು ಆ ವಾಕ್ಯದ ನಿಮಿತ್ತವಾಗಿ ಸಂಕಟವಾಗಲಿ ಹಿಂಸೆಯಾಗಲಿ ಬಂದರೆ ಬೇಗ ಎಡವಿ ಬೀಳುತ್ತಾನೆ;** (ಗ್ರೀಕ್ ಪದ ಸ್ಕ್ಯಾಂಡಲನ್) **ಇವನೇ ಬೀಜ ಬಿದ್ದ ಬಂಡೆಯ ನೆಲವಾಗಿರುವವನು.**

ಅಪೊಸ್ತಲನಾದ ಪೌಲನು ತನ್ನ ದಿನಗಳಲ್ಲಿ ಸುನ್ನತಿಯ ಬಗ್ಗೆ ಪ್ರಚಾರ ಮಾಡುವುದಕ್ಕೆ ಬದಲಾಗಿ ಯೇಸುವಿನ ಶಿಲುಬೆಯ ಕುರಿತಾದ ಸಂದೇಶವನ್ನು ಸಾರುವುದಕ್ಕೆ ಅಡ್ಡಿಯನ್ನು ಎದುರಿಸಿದನು.

**ಗಲಾತ್ಯದವರಿಗೆ 5:11**
**ನಾನಾದರೆ ಸಹೋದರರೇ, ಸುನ್ನತಿಯಾಗಬೇಕೆಂದು ಇನ್ನೂ ಸಾರುವವನಾಗಿದ್ದರೆ ಇನ್ನು ನನಗೆ ಹಿಂಸೆಯಾಗುವದು ಯಾಕೆ? ಆ ಪಕ್ಷದಲ್ಲಿ ಶಿಲುಬೆಯ ದೆಸೆಯಿಂದ ಉಂಟಾದ ಆಕ್ಷೇಪವು** (ಗ್ರೀಕ್ ಸ್ಕ್ಯಾಂಡಲನ್) **ಹೋಯಿತಲ್ಲಾ?**

## ದೇವರವಾಕ್ಯಕ್ಕಾಗಿಯೂ, ದೇವರ ಆತ್ಮನ ಕಾರ್ಯಕ್ಕಾಗಿಯೂ ದೃಢವಾಗಿ ನಿಲ್ಲುವಾಗ ಇದನ್ನು ಜನ ಮೆಚ್ಚದೆ ಇರುವಾಗ

**ಗಲಾತ್ಯದವರಿಗೆ 1:9,10**

**[9] ನೀವು ಸ್ವೀಕರಿಸಿದ ಸುವಾರ್ತೆಗೆ ವಿರುದ್ಧವಾದದ್ದನ್ನು ಯಾವನಾದರೂ ನಿಮಗೆ ಸಾರಿದರೆ ಅವನು ಶಾಪಗ್ರಸ್ತನಾಗಲಿ ಎಂದು ನಾವು ಮೊದಲು ಹೇಳಿದ್ದಂತೆಯೇ ಈಗಲೂ ನಾನು ತಿರಿಗಿ ಹೇಳುತ್ತೇನೆ.**
**[10] ನಾನೀಗ ಯಾರನ್ನು ಒಲಿಸಿಕೊಳ್ಳುತ್ತಾ ಇದ್ದೇನೆ? ಮನುಷ್ಯರನ್ನೋ? ದೇವರನ್ನೋ? ನಾನು ಮನುಷ್ಯರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುತ್ತಾ ಇದ್ದೇನೋ? ಇನ್ನೂ ಮನುಷ್ಯರನ್ನು ಮೆಚ್ಚಿಸುವವನಾಗಿದ್ದರೆ ನಾನು ಕ್ರಿಸ್ತನ ದಾಸನಲ್ಲ.**

ಜನಪ್ರಿಯ ಅಭಿಪ್ರಾಯದ ಮಾರ್ಗವು ಹೇಗಿರುತ್ತದೆ ಎಂಬುದು ರೋಮಾಪುರದವರಿಗೆ ಬರೆದ ಪತ್ರಿಕೆ 1ನೇ ಅಧ್ಯಾಯದಲ್ಲಿ ವರ್ಣಿಸಲ್ಪಟ್ಟಿದೆ.

ಜನರು

- *''ದುಷ್ಟತನವನ್ನು ನಡಿಸಿ ಸತ್ಯವನ್ನು ಅಣಗಿಸುವವರಾಗಿರುತ್ತಾರೆ''* (ರೋಮಾಪುರದವರಿಗೆ 1:18).
- *''ವ್ಯರ್ಥವಾದ ಆಲೋಚನೆಗಳಿಂದ ತುಂಬಿರುತ್ತಾರೆ''* (ರೋಮಾಪುರದವರಿಗೆ 1:21).
- *''ಮೂರ್ಖತನದಿಂದ ತುಂಬಿದ ಹೃದಯಗಳು ಕತ್ತಲಾಗುತ್ತವೆ''* (ರೋಮಾಪುರದವರಿಗೆ 1:21).
- *''ತಾವು ಜ್ಞಾನಿಗಳೆಂದು ಹೇಳಿಕೊಂಡು ಹುಚ್ಚರಾಗುತ್ತಾರೆ''* (ರೋಮಾಪುರದವರಿಗೆ 1:22).
- *''ದೇವರ ಸತ್ಯವನ್ನು ಸುಳ್ಳಿಗೆ ಬದಲಾಯಿಸಿಕೊಳ್ಳುತ್ತಾರೆ''* (ರೋಮಾಪುರದವರಿಗೆ 1:25).
- *''ದೇವರ ಜ್ಞಾನವು ಅವರಿಗೆ ಇಷ್ಟವಾಗುವುದಿಲ್ಲ''* (ರೋಮಾಪುರದವರಿಗೆ 1:28).
- *''ಕೀಳು ಮಟ್ಟದ ಮನಸ್ಸನ್ನು ಹೊಂದಿದವರಾಗಿ ಮಾಡಬಾರದ ಕೆಲಸಗಳನ್ನು ಮಾಡುತ್ತಾರೆ''* (ರೋಮಾಪುರದವರಿಗೆ 1:28).
- *''ಮರಣವನ್ನು ತಮ್ಮ ಮೇಲೆ ಹೊಂದುವುದಕ್ಕೆ ಪಾತ್ರವಾದ ಸಂಗತಿಗಳನ್ನು ನಡೆಸುತ್ತಾರೆ''* (ರೋಮಾಪುರದವರಿಗೆ 1:32).
- *''ಮರಣಕ್ಕೆ ಪಾತ್ರವಾದ ಸಂಗತಿಗಳನ್ನು ನಡೆಸುವ ಇತರರನ್ನೂ ಅನುಮೋದಿಸುತ್ತಾರೆ''* (ರೋಮಾಪುರದವರಿಗೆ 1:32).

ಇಂದಿನ ದಿನಗಳಲ್ಲಿ ದಾಂಪತ್ಯ ಜೀವಿತದ ಕುರಿತಾಗಿ, ಲೈಂಗಿಕ ಜೀವಿತದ ಕುರಿತಾಗಿ, ಕುಟುಂಬದ ಕುರಿತಾಗಿ, ಗಂಡ / ಹೆಂಡತಿಯ ಜವಾಬ್ದಾರಿಯ ಕುರಿತಾಗಿ, ತಂದೆ-ತಾಯಿಗಳನ್ನು ಸನ್ಮಾನಿಸುವ ಕುರಿತಾಗಿ, ಅಧಿಕಾರಿಗಳಿಗೆ ಮಾನ, ಗೌರವ ಕೊಡುವದರ ಕುರಿತಾಗಿ, ದೇವರು ಇಟ್ಟ ನಾಯಕತ್ವಕ್ಕೆ ಅಧೀನರಾಗುವ ಕುರಿತಾಗಿ, ಇವೇ ಮುಂತಾದ ವಿಷಯಗಳ ಕುರಿತಾಗಿ ದೇವರು ಹೇಳಿರುವ ಮಾತುಗಳಿಗಾಗಿ ನಾವು ದೇವರಿಗಾಗಿ ಒಂದು ನಿಲುವನ್ನು ತೆಗೆದುಕೊಳ್ಳುವಾಗ ಲೋಕವು ನಮ್ಮನ್ನು ಪರಿಹಾಸ್ಯ ಮಾಡುತ್ತದೆ. ಇದಕ್ಕೆ ಅವರು ಧರ್ಮಾಂಧತೆ, ಅಸಹಿಷ್ಣುತೆ, ಹಾಗೂ ದ್ವೇಷ, ಎಂಬ ಪಟ್ಟಿಯನ್ನು ಕಟ್ಟುತ್ತಾರೆ. ಹೀಗಿರುವಾಗ ವಿಶ್ವಾಸಿಯು ಏನು ಮಾಡಬೇಕು? ಸಭೆಯು ಇದಕ್ಕೆ ಯಾವ ರೀತಿಯಲ್ಲಿ ಪ್ರತಿಕ್ರಿಯೆಯನ್ನು ನೀಡಬೇಕು? ಓರ್ವ ಕ್ರೈಸ್ತ ನಾಯಕನು ಇದಕ್ಕೆ ಯಾವ ರೀತಿಯಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಬೇಕು? ಸಭೆಗೆ ಕೇವಲ ಒಂದೇ ಒಂದು ಆಯ್ಕೆ ಇದೆ. ಪೌಲನು ಬೋಧಿಸಿದಂತೆ *''ಜೀವ ಸ್ವರೂಪನಾದ ದೇವರ ಸಭೆಯು ಸತ್ಯಕ್ಕೆ ಸ್ತಂಭವೂ ಆಧಾರವೂ ಆಗಿದೆ''* (1 ತಿಮೊಥೆಯನಿಗೆ 3:15). ಸಭೆಯು ಸಮಾಜದಲ್ಲಿ ಸತ್ಯವನ್ನು ಎತ್ತಿ ಹಿಡಿಯುವದಕ್ಕಾಗಿಯೂ ಕಾಪಾಡುವದಕ್ಕಾಗಿಯೂ ಇದೆ. ಹಿಂಸೆಯನ್ನು ತಪ್ಪಿಸುವುದಕ್ಕಾಗಿ ಹಾಗೂ ಮನುಷ್ಯರನ್ನು ಮೆಚ್ಚಿಸುವುದಕ್ಕಾಗಿ ನಾವು ದೇವರ ಸತ್ಯದ ವಿಷಯದಲ್ಲಿ ರಾಜಿ ಮಾಡಿಕೊಳ್ಳಬಾರದು. ನಾವು ಸತ್ಯದ ವಿಷಯದಲ್ಲಿ ರಾಜಿ ಮಾಡಿಕೊಳ್ಳದೆ, ಪ್ರೀತಿಯಲ್ಲಿ ಸತ್ಯವನ್ನು ಮಾತನಾಡಬೇಕು. ನಾವು ಜನರು ಇದ್ದ ಹಾಗೆ ಅವರನ್ನು ಪ್ರೀತಿಸಬೇಕು, ಆದರೆ ಹೃದಯಗಳನ್ನು ಮಾರ್ಪಡಿಸಲು ಶಕ್ತಿಯುಳ್ಳ ದೇವರ ಸತ್ಯವನ್ನು ಇದ್ದಹಾಗೆ ಬೋಧಿಸಬೇಕು. ಕೆಲವರು ದೇವರ ವಾಕ್ಯದ ಸತ್ಯವನ್ನು ಹಾಗೂ ಆತನ ಆತ್ಮದ ಕಾರ್ಯವನ್ನು ಅಡ್ಡಿ ಎಂಬುದಾಗಿ ಭಾವಿಸಿ ಅದನ್ನು ಎದುರಿಸಬಹುದು. ಆದರೆ ನಾವು ದೇವರ ವಾಕ್ಯದಲ್ಲಿ ದೃಢವಾಗಿ ನಿಂತು ಕೊಳ್ಳುವುದನ್ನು ಬಿಟ್ಟು ನಮಗೆ ಬೇರೆ ಆಯ್ಕೆಯೇ ಇಲ್ಲ.

## ಇನ್ನೂ ಅನೇಕ ಅವಕಾಶಗಳು

ನೋವುಗಳು ಅಡ್ಡಿಗಳು ಬಂದೇ ಬರುತ್ತದೆ. ವಿಶ್ವಾಸಿಗಳಾದ ನಮಗೆ ಅನೇಕ ಸಂದರ್ಭಗಳಲ್ಲಿ ನಾವು ಎಡವಿ ಬೀಳುವಂತೆ ಅಡ್ಡಿಗಳು ಎದುರಾಗುತ್ತವೆ. ನಾವು ಈ ಅಧ್ಯಾಯದಲ್ಲಿ ಕೆಲವನ್ನು ವಿವರಿಸುತ್ತೇವೆ. ನಮಗೆ ಅಡ್ಡಿಗಳು ಬರುವಾಗ ಅವುಗಳನ್ನು ನಾವು ಹೇಗೆ ನಿಭಾಯಿಸುವದು ಎಂಬುದೇ ಇಲ್ಲಿ ಇರುವ ನಿಜವಾದ ವಿಷಯವಾಗಿರುತ್ತದೆ. **ನಮಗೆ ತೊಡಕುಗಳು, ಅಡ್ಡಿಗಳು ಬರುವ**

**ಪ್ರತೀ ಸಂದರ್ಭವೂ, ವೈರಿಯು ನಮಗಾಗಿ ಇಟ್ಟಿರುವ ಬೋನಿನ ಒಳಗೆ ನಾವು ಎಡವಿ ಬೀಳುವದಕ್ಕೆ ಅವನೇ ಏರ್ಪಡಿಸಿರುವ ಅವಕಾಶವಾಗಿದೆ.** ಯಾವದೇ ಸಂದರ್ಭ, ಏನೇ ಸನ್ನಿವೇಶಗಳು ನಮಗೆ ಎದುರಾದರೂ ನಾವು ನಮ್ಮ ಜೀವಿತದಲ್ಲಿ ಅಡ್ಡಿ,ತೊಡಕು,ನೋವುಗಳಿಗೆ ಸ್ಥಳಾವಕಾಶ ಮಾಡಿಕೊಡಬಾರದು ಎಂಬದನ್ನು ನಮ್ಮೊಳಗೆ ನಾವು ನಿರ್ಧರಿಸಿಕೊಳ್ಳಬೇಕು.

## ಪುನರಾವಲೋಕನ

1) ಅಧ್ಯಾಯದಲ್ಲಿ ತಿಳಿಸಿರುವ ಯಾವದೇ ಅಡ್ಡಿಗಳು ತೊಡಕುಗಳನ್ನು ನೀವು ಎದುರಿಸಿರುವಿರೋ? ಇಂತಹ ವಿಭಿನ್ನ ಸನ್ನಿವೇಶಗಳಲ್ಲಿ ನೀವು ಅವುಗಳನ್ನು ಯಾವ ರೀತಿಯಲ್ಲಿ ನಿಭಾಯಿಸುವಿರಿ?

- ಲೋಕದಿಂದ ಬರುವ ಅಡ್ಡಿ ತೊಡಕುಗಳು
- ಉದ್ದೇಶಪೂರ್ವಕವಲ್ಲದ ಪ್ರಮಾದವಶಾತ್ ಬರುವ ಅಡ್ಡಿಗಳು
- ಅಧಿಕಾರದಲ್ಲಿರುವವರಿಂದ ಬರುವ ಅಡ್ಡಿಗಳು
- ದೇವರ ನಿಮಿತ್ತವಾಗಿ ಬರುವ ಅಡ್ಡಿಗಳು
- ಯೇಸುಕ್ರಿಸ್ತನ ನಿಮಿತ್ತವಾಗಿ ಬರುವ ಅಡ್ಡಿಗಳು
- ದೇವರ ವಾಕ್ಯದ ನಿಮಿತ್ತವಾಗಿಯೂ ಆತ್ಮನ ನಿಮಿತ್ತವಾಗಿಯೂ ಬರುವ ಅಡ್ಡಿಗಳು

# 3
# ಆಯ್ಕೆಯು ನಿಮ್ಮದು

## ನೋವು ಎಂಬ ರೇಖೆಯನ್ನು ಮೆಟ್ಟಿನಿಂತು ಜೀವಿಸುವದು

**ಜ್ಞಾನೋಕ್ತಿಗಳು 4:23**
**ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೋ; ಅದರೊಳಗಿಂದ ಜೀವಧಾರೆಗಳು ಹೊರಡುವವು.**

**ಮತ್ತಾಯ 12:35**
**ಒಳ್ಳೆಯವನು ತನ್ನ ಒಳ್ಳೆಯ ಬೊಕ್ಕಸದೊಳಗಿಂದ ಒಳ್ಳೆಯ ವಸ್ತುಗಳನ್ನು ತೆಗೆಯುತ್ತಾನೆ; ಕೆಟ್ಟವನು ಕೆಟ್ಟ ಬೊಕ್ಕಸದೊಳಗಿಂದ ಕೆಟ್ಟ ವಸ್ತುಗಳನ್ನು ತೆಗೆಯುತ್ತಾನೆ.**

ನಾವು ನಮ್ಮ ಹೃದಯಗಳನ್ನು ಕಾಪಾಡಿಕೊಳ್ಳಬೇಕು, ನಮ್ಮ ಆಂತರ್ಯದ ಮನುಷ್ಯನನ್ನು ಕಾಪಾಡಿಕೊಳ್ಳಬೇಕು, ಯಾಕೆಂದರೆ ನಮ್ಮ ಹೃದಯದ ಒಳಗಿಂದ ನಮ್ಮ ಜೀವಿತಗಳನ್ನು ರೂಪಿಸುವ ಶಕ್ತಿಯು ಹೊರಹೊಮ್ಮುತ್ತದೆ.

ನಮ್ಮ ಹೃದಯದ ಒಳಗೆ ಏನಿರುತ್ತದೋ ಅದುವೇ ನಮ್ಮ ಜೀವಿತಗಳಲ್ಲಿ ಹೊರಬರುತ್ತದೆ.

ನಮ್ಮ ಜೀವಿತಗಳಲ್ಲಿ ಆಗುತ್ತಿರುವಂತಹ ಸಂಗತಿಗಳನ್ನು ಬದಲಾಯಿಸಬೇಕಾದರೆ ನಾವು ನಮ್ಮ ಹೃದಯದ ಒಳಗೆ ಇಟ್ಟಿರುವ ಸಂಗತಿಗಳನ್ನು ಬದಲಾಯಿಸಬೇಕು.

ನಾವು ಈಗಾಗಲೇ ನೋಡಿರುವಂತೆ, ಅಡ್ಡಿಗಳು ನಾವು ಎಡವಿ ಬೀಳುವಂತೆ ಹಾಗೂ ಬೋನಿನಲ್ಲಿ ಸಿಕ್ಕಿ ಬೀಳುವಂತೆ ಮಾಡುವ ಅವಕಾಶಗಳಾಗಿವೆ. ಇದು ನಾವು ಪಾಪ ಹಾಗೂ ತಪ್ಪಿಗೆ ಸಿಕ್ಕಿ ಬೀಳುವಂತೆ ಮಾಡುತ್ತದೆ. ನಮಗೆ ಎಲ್ಲಾ ವಿಧಗಳಲ್ಲಿಯೂ ಎಲ್ಲಾ ತರದ ಜನರ ಮೂಲಕವಾಗಿಯೂ ಅಡ್ಡಿಗಳು ಬರುತ್ತವೆ. ಹೇಗಿದ್ದರೂ ಇವುಗಳನ್ನು ಸ್ವೀಕರಿಸುವುದೋ ಅಥವಾ ತಿರಸ್ಕರಿಸುವದೋ ಅದು ನಮಗೆ ಬಿಟ್ಟದ್ದು. ನಮ್ಮ ಮಾರ್ಗದಲ್ಲಿ ಅಡ್ಡಿಗಳು ತೊಡಕುಗಳು ಎದುರಾದಾಗ

ಅದನ್ನು ನಮ್ಮ ಜೀವಿತದಲ್ಲಿ ತೆಗೆದುಕೊಳ್ಳುವ ಅಥವಾ ಅದನ್ನು ತಿರಸ್ಕರಿಸುವ ಆಯ್ಕೆಯನ್ನು ನಾವೇ ಮಾಡಬೇಕಾಗುತ್ತದೆ.

ನಿಮಗೆ ನೋವು ಅಥವಾ ಅಡ್ಡಿಗಳು ಉಂಟಾದಾಗ, ಅಂದರೆ ಯಾರಾದರೂ ಹೇಳಿದ ಯಾವದೋ ಮಾತುಗಳು ಅಥವಾ ಮಾಡಿದ ಸಂಗತಿಗಳು ಅಥವಾ ನಿಮ್ಮನ್ನು ಅವಮಾನ ಪಡಿಸಿದ ಘಟನೆಗಳು ಅಥವಾ ನಿಮಗೆ ಕೋಪ ತರುವ ಸಂಗತಿಗಳು ನಿಮಗೆ ಎದುರಾದಾಗ ಆ ಕ್ಷಣವೇ ನೀವು ಆಯ್ಕೆಯನ್ನು ಮಾಡಬಹುದು. ನೀವು ಈ ನೋವುಗಳು ನಿಮ್ಮ ಒಳಗೆ ಪ್ರವೇಶಿಸಿ ಸ್ಥಾನವನ್ನು ತೆಗೆದುಕೊಳ್ಳದಂತೆ ನಿಮ್ಮ ಹೃದಯವನ್ನು ಬಲು ಎಚ್ಚರಿಕೆಯಿಂದ ಕಾಪಾಡಬಹುದು. ನೋವು ಅಡ್ಡಿಯೂ ನಿಮ್ಮ ಹೃದಯದೊಳಗೆ ಸಂಗ್ರಹವಾಗದಂತೆ ನೀವು ಇದನ್ನು ತಿರಸ್ಕರಿಸುವ ಆಯ್ಕೆ ಮಾಡಬಹುದು. ಕೆಟ್ಟ ವಿಷಯಗಳು ನಿಮ್ಮೊಳಗೆ ಸಂಗ್ರಹವಾದರೆ ಅದು ನಿಮ್ಮ ಜೀವಿತದಲ್ಲಿ ಕೆಟ್ಟ ವಿಷಯಗಳನ್ನೇ ಹೊರಹೊಮ್ಮಿಸುತ್ತದೆ.

ನಿಮಗೆ ನೋವು ಅಡ್ಡಿಯೂ ಎದುರಾದಾಗ ನೀವು ಅದನ್ನು ಮೆಟ್ಟಿ ನಿಂತು ಜೀವಿಸುವ ಆಯ್ಕೆಯನ್ನು ಮಾಡಬಹುದು. ನೋವಿನ ರೇಖೆಯ ಮೇಲೆ ನಿಂತು ಜೀವಿಸುವ ಆಯ್ಕೆಯನ್ನು ಮಾಡಿಕೊಳ್ಳಿ. ಅದನ್ನು ತೆಗೆದುಕೊಳ್ಳಲು ಕೆಳಕ್ಕೆ ಬಗ್ಗಬೇಡಿ. ಪ್ರೀತಿಯ ಉನ್ನತ ಸ್ತರದಲ್ಲಿ ಜೀವಿಸಿ. (ಇದನ್ನು ನಾವು ಮುಂದಿನ ಅಧ್ಯಾಯದಲ್ಲಿ ಚರ್ಚಿಸೋಣ.)

ಅಪೊಸ್ತಲನಾದ ಪೌಲನು ಏನು ಹೇಳಿದ್ದಾನೆ ಎಂಬುದನ್ನು ಗಮನಿಸಿ:

**ಅಪೊಸ್ತಲರ ಕೃತ್ಯಗಳು 24:16**
**ಇದರ ದೆಸೆಯಿಂದ ದೇವರ ವಿಷಯದಲ್ಲಿಯೂ ಮನುಷ್ಯರ ವಿಷಯದಲ್ಲಿಯೂ ನಾನು ನಿರ್ದೋಷಿ ಎಂದು ಸಾಕ್ಷಿ ಹೇಳುವ ಮನಸ್ಸು ನನಗೆ ಯಾವಾಗಲೂ ಇರಬೇಕೆಂದು ಅಭ್ಯಾಸಮಾಡಿಕೊಳ್ಳುತ್ತೇನೆ.**

ದೇವರ ವಿಷಯದಲ್ಲಿಯೂ ಮನುಷ್ಯರ ವಿಷಯದಲ್ಲಿಯೂ ಶುದ್ಧ ಮನಸ್ಸಾಕ್ಷಿಯನ್ನು ಇಟ್ಟುಕೊಳ್ಳುವ ಕಠಿಣ ಪ್ರಯತ್ನವನ್ನು ಪೌಲನು ಮಾಡಿದನು.

''ಅಭ್ಯಾಸ ಮಾಡಿಕೊಳ್ಳುವುದು'' ಎಂಬ ಪದಕ್ಕೆ ಗ್ರೀಕ್ ಮೂಲ ಪದ 'ಆಸ್ಕಿಯೋ' ಎಂಬುದಾಗಿದೆ. ಇದರ ಅರ್ಥ ''ತರಬೇತು ಮಾಡುವದು, ಶ್ರಮ ಪಡುವದು, ಅಭ್ಯಾಸ ಮಾಡುವದು, ಪ್ರಯಾಸ ಪಡುವದು, ಕಠಿಣ ಪರಿಶ್ರಮ ತೆಗೆದುಕೊಳ್ಳುವದು'' ಎಂಬದಾಗಿದೆ.

ಪೌಲನು ಇಲ್ಲಿ ''ಅಡ್ಡಿ'' ಎಂದು ಉಪಯೋಗ ಮಾಡುವಾಗ ಅದಕ್ಕೆ ಉಪಯೋಗಿಸಿದ ಗ್ರೀಕ್ ಪದವು 'ಅಪ್ರೊಸ್ಕೊಪೋಸ್.' ಈ ಪದವು ನಾವು ಹಿಂದೆ ನೋಡಿದ 'ಸ್ಕ್ಯಾಂಡಲನ್' ಎಂಬ ಪದಕ್ಕಿಂತ ಭಿನ್ನವಾಗಿರುತ್ತದೆ. 'ಅಪ್ರೊಸ್ಕೊಪೋಸ್' ಎಂದು ಕರೆಯಲ್ಪಡುವ ಅಡ್ಡಿಗೆ ಮೂರು ವಿಧದ ಅರ್ಥಗಳು ಇವೆ.

1) ಇತರರು ಎಡವುವದಕ್ಕೆ ಅವಕಾಶ ನೀಡದಿರುವದು, ಅಂದರೆ ಇತರರು ಪಾಪ ಮಾಡುವುದಕ್ಕೆ ಕಾರಣರಾಗದಿರುವದು.
2) ಎಡವದೆ ಇರುವದು, ಅಂದರೆ ಪಾಪಕ್ಕೆ ಬೀಳದಿರುವದು, ನಿರ್ದೋಷಿಗಳಾಗಿರುವದು.
3) ಪಾಪದ ಅರಿವೇ ಮನಸ್ಸಿನಲ್ಲಿ ಇಲ್ಲದಿರುವದು. ಪಾಪರಹಿತವಾದ ಶುದ್ಧ ಹೃದಯ ಇರುವದು.

ಹೀಗಿರುವುದರಿಂದ, ಪೌಲನು ತನ್ನ ಮನಸ್ಸಾಕ್ಷಿಯು ಪಾಪರಹಿತವಾಗಿಯೂ ತಪ್ಪನ್ನು ಮಾಡದಂತೆಯೂ ಶುದ್ಧವಾಗಿಡುವ ಎಲ್ಲಾ ಪ್ರಯತ್ನವನ್ನು ಮಾಡುತ್ತಿದ್ದನು. ಆತನು ಪಾಪವನ್ನು ಮಾಡುವುದಾಗಲಿ–ಇತರರನ್ನು ಪಾಪಕ್ಕೆ ಪ್ರೇರಿಸುವುದಾಗಲಿ, ಅಥವಾ ಪಾಪದ ಮನಸ್ಸಾಕ್ಷಿಯಲ್ಲಿ ಜೀವಿಸುವದಾಗಲಿ ಈ ಮುಂತಾದ ಯಾವುದೇ ರೂಪದಲ್ಲಿ ಪಾಪವನ್ನು ತನ್ನ ಆಂತರ್ಯದ ಮನುಷ್ಯನೊಳಗೆ ಪ್ರವೇಶಿಸಲು ಅನುಮತಿಸಲಿಲ್ಲ. ಆತನು ತನ್ನ ಹೃದಯವನ್ನು (ಹಾಗೂ ಅದರೊಂದಿಗೆ ತನ್ನ ಮನಸ್ಸಾಕ್ಷಿಯನ್ನು) ಶುದ್ಧವಾಗಿಯೂ ಸ್ಪಷ್ಟವಾಗಿ ಇಟ್ಟುಕೊಳ್ಳುವ ಆಯ್ಕೆಯನ್ನು ಮಾಡಿದನು.

ನಾವು ಅಡ್ಡಿ, ನೋವುಗಳನ್ನು ಮೆಟ್ಟಿ ನಿಂತು ಜೀವಿಸುವ ಹಾಗೂ ನಮ್ಮ ಹೃದಯಗಳನ್ನು ದೇವರ ದೃಷ್ಟಿಗೂ, ಮನುಷ್ಯರ ದೃಷ್ಟಿಗೂ ಶುದ್ಧವಾಗಿಯೂ ಸ್ಪಷ್ಟವಾಗಿಯೂ ಇಡುವ ಆಯ್ಕೆಯನ್ನು ಮಾಡಬಹುದು. ಇದು ಸುಲಭವಾದುದಲ್ಲ. ನಾವು ನಮ್ಮನ್ನೇ ತರಬೇತುಗೊಳಿಸಬೇಕು ಹಾಗೂ ಈ ಸಂಗತಿಗಳನ್ನು ಅನುಸರಿಸಲು ಕಠಿಣ ಪರಿಶ್ರಮ ಪಡಬೇಕು. ಹೀಗೆ ಮಾಡುವುದು ಪ್ರಯೋಜನಕಾರಿಯಾಗಿದೆ. ಈ ರೀತಿಯಲ್ಲಿ ನಾವು ಅಡ್ಡಿ, ನೋವುಗಳನ್ನು ಮೆಟ್ಟಿ ನಿಲ್ಲುವ ಜೀವಿತವನ್ನು ಜೀವಿಸಬಹುದು.

ನಮಗೆ ಅಡ್ಡಿಗಳು, ತೊಡಕುಗಳು ಎದುರಾದಾಗ ನಾವು ಮಾಡಬಹುದಾದ ಕೆಲವು ಹೃದಯದ ಆಯ್ಕೆಗಳ ಬಗ್ಗೆ ಚರ್ಚಿಸೋಣ:

## ಬಿಟ್ಟುಬಿಡುವ (ಮರೆತುಬಿಡುವ) ಸದ್ಗುಣ

**ಆದಿಕಾಂಡ 50:15-21**

**15 ಯೋಸೇಫನ ಅಣ್ಣತಮ್ಮಂದಿರು ತಂದೆ ಸತ್ತದ್ದನ್ನು ಕಂಡು–ಒಂದು ವೇಳೆ ಯೋಸೇಫನು ನಮ್ಮನ್ನು ದ್ವೇಷಿಸಿ ನಾವು ಅವನಿಗೆ ಮಾಡಿದ ಎಲ್ಲಾ ಕೇಡಿಗೆ ಪ್ರತಿಯಾಗಿ ಪೂರಾ ಶಿಕ್ಷೆಯನ್ನು ಕೊಟ್ಟಾನು ಎಂದು ತಮ್ಮತಮ್ಮೊಳಗೆ ಮಾತಾಡಿಕೊಂಡು ಯೋಸೇಫನಿಗೆ,**

**16 ನಿನ್ನ ತಂದೆಯು ಸಾಯುವದಕ್ಕಿಂತ ಮುಂಚೆ ನಮಗೆ ಅಪ್ಪಣೆಮಾಡಿದ್ದೇನಂದರೆ, ನೀವು ಯೋಸೇಫನಿಗೆ**

**17 ನಿನ್ನ ಅಣ್ಣಂದಿರಾದ ನಾವು ನಿನಗೆ ಕೇಡು ಮಾಡಿದ್ದು ನಿಜವೇ; ಆದರೂ ನಮ್ಮ ಅಪರಾಧವನ್ನೂ ಪಾಪವನ್ನೂ ಕ್ಷಮಿಸು ಎಂಬದಾಗಿ ಹೇಳಿಕೊಳ್ಳಬೇಕು; ಹೀಗೆ ಅವನು ಅಪ್ಪಣೆಮಾಡಿದ್ದರಿಂದ ನೀನು ಈಗ ನಿನ್ನ ತಂದೆಯ ದೇವರಿಗೆ ಭಕ್ತರಾಗಿರುವ ನಾವು ಮಾಡಿದ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತೇವೆಂದು ಹೇಳಿ ಕಳುಹಿಸಿದರು. ಯೋಸೇಫನು ಈ ಮಾತುಗಳನ್ನು ಕೇಳಿ ಕಣ್ಣೀರು ಸುರಿಸಿದನು.**

**18 ಇದಲ್ಲದೆ ಅಣ್ಣಂದಿರು ತಾವೇ ಬಂದು ಅವನ ಮುಂದೆ ಅಡ್ಡಬಿದ್ದು–ಇಗೋ, ನಾವು ನಿನಗೆ ಗುಲಾಮರು ಅಂದರು.**

**19 ಯೋಸೇಫನು ಅವರಿಗೆ–ಹೆದರಬೇಡಿರಿ; ನಾನೇನು ದೇವರ ಪ್ರತಿನಿಧಿಯೇ? ನೀವಂತೂ ನನಗೆ ಕೇಡಾಗಬೇಕೆಂದು ಎಣಿಸಿದ್ದಿರಿ;**

**20 ಆದರೆ ದೇವರು ಮೇಲಾಗಬೇಕೆಂದು ಸಂಕಲ್ಪಿಸಿದನು. ಈಗ ಅನುಭವಕ್ಕೆ ಬಂದ ಪ್ರಕಾರವೇ ಅನೇಕ ಪ್ರಾಣಿಗಳಿಗೆ ಸಂರಕ್ಷಣೆಯುಂಟಾಗುವಂತೆ ಮಾಡಿದನು.**

**21 ಆದದರಿಂದ ನೀವು ಸ್ವಲ್ಪವೂ ಭಯಪಡಬೇಡಿರಿ; ನಾನು ನಿಮ್ಮನ್ನೂ ನಿಮಗೆ ಸೇರಿದವರೆಲ್ಲರನ್ನೂ ಪೋಷಿಸುವೆನು ಎಂದು ಹೇಳಿ ಅವರನ್ನು ಸಂತೈಸಿ ಅವರ ಸಂಗಡ ಪ್ರೀತಿಯಿಂದ ಮಾತಾಡಿದನು.**

ತನಗೆ ಕೆಟ್ಟದ್ದನ್ನೇ ಮಾಡಿದ ತನ್ನ ಸಹೋದರರಿಗೆ ಮುಯ್ಯಿ ತೀರಿಸುವ ಒಂದು ಅವಕಾಶವು ಯೋಸೇಫನಿಗೆ ಇದ್ದಿತು. ಸಹೋದರರಾದರೋ ಆತನಿಂದ ಕೆಡುಕನ್ನೇ ಎದುರು ನೋಡುತ್ತಿದ್ದರು. ಹೇಗಿದ್ದರೂ ನಾವು ನೋಡುವಂತೆ ಯೋಸೇಫನ ಹೃದಯದಲ್ಲಿ ಅವರು ಆತನಿಗೆ ಮಾಡಿದ ಸಂಗತಿಗಳ ಕುರಿತಾಗಿ ಕಹಿಭಾವನೆಯಾಗಲಿ, ದ್ವೇಷವಾಗಲಿ, ಕೆಟ್ಟ ಭಾವನೆಯಾಗಲಿ ಇರುವ ಸುಳಿವು ಸಿಗುವುದಿಲ್ಲ. ಆತನು ಆ ಸಂಗತಿಯನ್ನು ಬಹಳ ಕಾಲದ ಹಿಂದೆ ಮರೆತುಬಿಟ್ಟಿದ್ದನು. ಆತನು ಈ ಸಂಗತಿಗಳನ್ನು ತನ್ನ ಉದಾರ ದೃಷ್ಟಿಯಿಂದಲೂ ಮಹಾನ್ ದೃಷ್ಟಿಯಿಂದ ನೋಡಿದನು. ದೇವರು ನೋಡುವ ರೀತಿಯಲ್ಲಿ ಆತನು ಅದನ್ನು

ನೋಡಿದನು. ಯೋಸೇಫನಂತೆ ನಾವು ಸಹ ನಮಗೆ ಯಾವ ಸಂಗತಿಗಳು ನೋವು ಮಾಡಿರುವದೋ ಅವುಗಳನ್ನು ನಾವು ಬಿಟ್ಟುಬಿಡಬೇಕೆನ್ನುವ ಆಯ್ಕೆ ಮಾಡಬೇಕು. ನಮಗೆ ಯಾವ ವ್ಯಕ್ತಿಗಳ (ಜನರು) ಮೂಲಕವಾಗಿ ನೋವುಂಟಾಗಿದೆಯೋ, ಅವರನ್ನು ಕ್ಷಮಿಸಿ ಬಿಡಬೇಕು. ಅವರು ಏನು ಮಾಡಿರುತ್ತಾರೋ ಮತ್ತು ಏನು ಹೇಳಿರುತ್ತಾರೋ ಅವುಗಳನ್ನು ಮರೆತುಬಿಡಬೇಕು.

ದೇವರ ದೃಷ್ಟಿಕೋನದಿಂದ ಸಂಗತಿಗಳನ್ನು ನೋಡಿರಿ. ''ಅವರು ಯಾಕೆ ನನಗೆ ಹೀಗೆ ಮಾಡಿದರು?'' ''ಇದೆಲ್ಲವೂ ಅಂತಿಮವಾಗಿ ಎಲ್ಲಿ ಹೋಗಿ ಸೇರುವದು?'' ''ಹಾಗೂ ಅವರು ನನಗೆ ವಿರುದ್ಧವಾಗಿ ತಪ್ಪು ಮಾಡಿದ್ದಾರೆ ಎಂದು ಅವರು ಯಾವಾಗ ಅರಿತುಕೊಳ್ಳುವರು?'' ಈ ಎಲ್ಲಾ ಪ್ರಶ್ನೆಗಳಿಗೆ ನಿಮಗೆ ಉತ್ತರವು ಇಲ್ಲದಿದ್ದರೂ ಇವೆಲ್ಲವುಗಳನ್ನು ಮರೆತು, ಬಿಟ್ಟು ಬಿಡುವ ಆಯ್ಕೆಯನ್ನು ಮಾಡಿರಿ. ಈ ಎಲ್ಲಾ ಸಂಗತಿಗಳ ಮಧ್ಯೆದಲ್ಲೂ ದೇವರು ಒಳ್ಳೆಯದನ್ನೇ ಮಾಡುತ್ತಾನೆ ಶ್ರೇಷ್ಠ ಕಾರ್ಯಗಳನ್ನು ಮಾಡುತ್ತಾನೆ ಎಂದು ದೇವರ ಮೇಲೆ ಭರವಸೆ ಇಡಿರಿ. ಈ ನೋವುಗಳನ್ನು ನನ್ನ ಹೃದಯದ ಒಳಗೆ ನಾನು ತೆಗೆದುಕೊಳ್ಳುವುದೇ ಇಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಿ. ನಿಮ್ಮ ಹೃದಯವನ್ನು ಕಾಪಾಡಿಕೊಳ್ಳುವುದೇ ನಿಮ್ಮ ಆದ್ಯತೆಯಾಗಿರುವುದರಿಂದ ನೀವು ಈ ಸಂಗತಿಗಳನ್ನು ಬಿಟ್ಟು ಬಿಡುವ ಆಯ್ಕೆಯನ್ನು ಇಚ್ಛಾಪೂರ್ವಕವಾಗಿಯೇ ಮಾಡಬೇಕು. ಎದುರಾದ ಈ ನೋವುಗಳನ್ನು ಸ್ವೀಕರಿಸುವುದಿಲ್ಲ ಎಂಬ ಆಯ್ಕೆಯನ್ನು ಮಾಡಬೇಕು.

## ದೇವರೇ ನಿನ್ನನ್ನು ಸಮರ್ಥಿಸಲಿ

**ರೋಮಾಪುರದವರಿಗೆ 12:17-21**

**17 ಯಾರಿಗೂ ಅಪಕಾರಕ್ಕೆ ಅಪಕಾರವನ್ನು ಮಾಡಬೇಡಿರಿ. ಎಲ್ಲರ ದೃಷ್ಟಿಯಲ್ಲಿ ಯಾವದು**
**ಗೌರವವಾದದ್ದೋ ಅದನ್ನೇ ಯೋಚಿಸಿ ಸಾಧಿಸಿರಿ.**
**18 ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ.**
**19 ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದೆ ಶಿಕ್ಷಿಸುವದನ್ನು ದೇವರಿಗೆ ಬಿಡಿರಿ.**
**ಯಾಕೆಂದರೆ ಮುಯ್ಯಿಗೆ ಮುಯ್ಯಿ ತೀರಿಸುವದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನು**
**ಎಂದು ಕರ್ತನು ಹೇಳುತ್ತಾನೆಂಬದಾಗಿ ಬರೆದದೆ.**
**20 ಹಾಗಾದರೆ ನಿನ್ನ ವೈರಿ ಹಸಿದಿದ್ದರೆ ಅವನಿಗೆ ಊಟಕ್ಕೆ ಬಡಿಸು; ಬಾಯಾರಿದ್ದರೆ ಕುಡಿಯುವದಕ್ಕೆ**
**ಕೊಡು. ಹೀಗೆ ಮಾಡುವದರಿಂದ ಅವನ ತಲೆಯ ಮೇಲೆ ಕೆಂಡಗಳನ್ನು ಕೂಡಿಸಿಟ್ಟಂತಾಗುವದು.**
**21 ಕೆಟ್ಟತನಕ್ಕೆ ಸೋತು ಹೋಗದೆ ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸು.**

ರೋಮಾಪುರದವರಿಗೆ ಬರೆದ ಪತ್ರಿಕೆ 12:17–21 ರಲ್ಲಿ ನಮಗೆ ತಿಳಿಸಲ್ಪಟ್ಟದ್ದನ್ನು ನಾವು ಅನುಸರಿಸಿದರೆ ನಮಗೆ ನೋವುಗಳು ಎದುರಾದಾಗ ಈ ಸಂಗತಿಗಳನ್ನು ಮಾಡುವೆವು.

- ನಮ್ಮನ್ನು ನೋಯಿಸುವ ವ್ಯಕ್ತಿಯನ್ನು ಪ್ರತಿಯಾಗಿ ನಾವೂ ನೋಯಿಸಿ ಎದುರಿಸುವುದಿಲ್ಲ.
- ನಮಗೆ ನೋವುಂಟು ಮಾಡಿದ ವ್ಯಕ್ತಿಯೊಂದಿಗೆ ಸಮಾಧಾನವನ್ನು ಸ್ಥಾಪಿಸಲು ಪ್ರಯತ್ನಿಸುವ ಆಯ್ಕೆಯನ್ನು ಮಾಡುತ್ತೇವೆ.
- ನಮಗೆ ನೋವುಂಟು ಮಾಡಿದ ವ್ಯಕ್ತಿಗೆ ನಾವು ಒಳ್ಳೆಯದನ್ನೇ ಮಾಡಿ ಆ ವ್ಯಕ್ತಿಯನ್ನು ಆಶೀರ್ವದಿಸುತ್ತೇವೆ.

ಈ ಸಂಗತಿಗಳನ್ನು ನಾವು ಮಾಡುವಾಗ, ದೇವರೇ ನಮ್ಮನ್ನು ಸಮರ್ಥಿಸುವುದಕ್ಕೆ ನಾವು ಆತನಿಗೆ ದಾರಿ ಬಿಟ್ಟು ಕೊಟ್ಟಂತಾಗುತ್ತದೆ. ನಮ್ಮ ಹೃದಯಗಳನ್ನು ನೋಡುವ ಹಾಗೂ ನಮ್ಮ ಉದ್ದೇಶವನ್ನು ತಿಳಿದಿರುವ ಆತನು ನೀತಿಯುಳ್ಳ ನ್ಯಾಯಾಧಿಪತಿಯಾಗಿದ್ದಾನೆ, ಹಾಗೂ ನಾವು ಈ ಸಂಗತಿಗಳನ್ನು ಆತನ ಕೈಗಳಲ್ಲಿ ಒಪ್ಪಿಸಿಕೊಡುವ ಆಯ್ಕೆಯನ್ನು ಮಾಡಿದಾಗ ಆತನೇ ನಮ್ಮನ್ನು ಸಮರ್ಥಿಸುವ ದೇವರಾಗಿದ್ದಾನೆ.

ಯೇಸು ನಮಗೆ ಬಿಟ್ಟುಹೋಗಿರುವ ಉದಾಹರಣೆ ಇದೇ ಆಗಿರುತ್ತದೆ.

**1 ಪೇತ್ರನು 2:23**
**ಆತನು ಬಾಧೆಯನ್ನನುಭವಿಸಿದಾಗ ಯಾರನ್ನೂ ಬೆದರಿಸದೆ ನ್ಯಾಯವಾಗಿ ತೀರ್ಪುಮಾಡುವಾತನಿಗೆ ತನ್ನ ಕಾರ್ಯವನ್ನು ಒಪ್ಪಿಸಿದನು.**

## ಅಹಂಕಾರವು ನಿಮ್ಮ ಹೃದಯವನ್ನು ಆಳಲು ಬಿಡಬೇಡಿ

ನಾವು ನಮಗಾದ ನೋವುಗಳನ್ನು ಹಿಡಿದುಕೊಳ್ಳುವ ಮುಖ್ಯ ಕಾರಣವೇನೆಂದರೆ ನಮ್ಮ ಅಹಂಕಾರಕ್ಕೆ ಏಟು ಬಿದ್ದಿರುತ್ತದೆ.

**ಮತ್ತಾಯ 11:28–30**
**28 ಎಲೇ ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಕೊಡುವೆನು.**

**[29] ನಾನು ಸಾತ್ವಿಕನೂ ದೀನಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ**
**ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು.**
**[30] ಯಾಕಂದರೆ ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು ಅಂದನು.**

ಯೇಸುವು ತಾನು ಸಾತ್ವಿಕನಾಗಿಯೂ ದೀನ ಮನಸ್ಸುಳ್ಳವನಾಗಿಯೂ ತಗ್ಗಿದ ಹೃದಯವುಳ್ಳವನಾಗಿಯೂ ಜೀವಿಸಿದೆನು ಎಂದು ತಿಳಿಸುತ್ತಾನೆ. ನಾವು ಆತನಿಂದ ಕಲಿತುಕೊಂಡು ಈ ಸಂಗತಿಗಳಲ್ಲಿ ಆತನನ್ನೇ ಅನುಸರಿಸುವವರಾಗಿರಬೇಕು.

ನಾವು ದೀನ ಹಾಗೂ ಸಾತ್ವಿಕ ಹೃದಯ ಉಳ್ಳವರಾಗಿ ಯೇಸುವಿನಂತೆ ನಡೆಯುವಾಗ ನಮಗೆ ಯಾವ ಸಂಗತಿಗಳು ನೋವನ್ನುಂಟು ಮಾಡಲಾರವು.

ಯೇಸು ಹೇಳಿದ ಈ ಸಾಮ್ಯವನ್ನು ಗಮನಿಸಿರಿ.

**ಲೂಕ 14:7-11**

**[7] ಊಟಕ್ಕೆ ಕರಿಸಿಕೊಂಡವರು ಪಂಕ್ತಿಯ ಮೊದಲನೆಯ ಸ್ಥಾನವನ್ನು ಆರಿಸಿಕೊಳ್ಳುವದನ್ನು ನೋಡಿ**
**ಯೇಸು ಒಂದು ಸಾಮ್ಯವನ್ನು ಹೇಳಿದನು. ಏನೆಂದರೆ–**
**[8] ಯಾವನಾದರೂ ನಿನ್ನನ್ನು ಮದುವೆ ಊಟಕ್ಕೆ ಕರೆದರೆ ಪಂಕ್ತಿಯೊಳಗೆ ಮೊದಲನೆಯ ಸ್ಥಾನದಲ್ಲಿ**
**ಕೂತುಕೊಳ್ಳಬೇಡ; ಒಂದು ವೇಳೆ ನಿನಗಿಂತ ಮಾನವುಳ್ಳವನನ್ನು ಅವನು ಕರೆದಿರಬಹುದು,**
**[9] ಮತ್ತು ನಿನ್ನನ್ನೂ ಅವನನ್ನೂ ಕರೆದವನು ಬಂದು–ಇವನಿಗೆ ಸ್ಥಳಬಿಡು ಎಂದು ನಿನಗೆ ಹೇಳುವಾಗ**
**ನೀನು ನಾಚಿಕೊಂಡು ಕಡೆಯ ಸ್ಥಾನದಲ್ಲಿ ಕೂತುಕೊಳ್ಳುವದಕ್ಕೆ ಹೋಗುವಿ.**
**[10] ಆದರೆ ಯಾವನಾದರೂ ನಿನ್ನನ್ನು ಕರೆದಾಗ ನೀನು ಹೋಗಿ ಕಡೆಯ ಸ್ಥಾನದಲ್ಲಿ ಕೂತುಕೋ;**
**ಹೀಗೆ ಮಾಡಿದರೆ ನಿನ್ನನ್ನು ಕರೆದವನು ಬಂದು ನಿನ್ನನ್ನು ನೋಡಿ–ಸ್ನೇಹಿತನೇ, ಇನ್ನೂ ಮೇಲಕ್ಕೆ ಬಾ**
**ಅನ್ನುವನು. ಆಗ ನಿನ್ನ ಸಂಗಡ ಕೂತಿರುವವರೆಲ್ಲರ ಮುಂದೆ ನಿನಗೆ ಮಾನ ಬರುವದು.**
**[11] ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು**
**ಹೆಚ್ಚಿಸಲ್ಪಡುವನು ಅಂದನು.**

ನಾವು ಉದ್ದೇಶಪೂರ್ವಕವಾಗಿಯೇ ನಮ್ರರಾಗಿಯೂ ದೀನ ಹೃದಯ ಉಳ್ಳವರಾಗಿಯೂ ನಡೆದುಕೊಳ್ಳಬೇಕೆಂದು ಯೇಸುವು ನಮಗೆ ಬೋಧಿಸುತ್ತಾನೆ. ನಿಮ್ಮನ್ನು ಯಾರೂ ನೋಯಿಸಲು ಆಗದ ರೀತಿಯಲ್ಲಿ ನೀವು ನಡೆದುಕೊಳ್ಳಿರಿ.ನೀವು ಅತ್ಯಂತ ಕೆಳಗಿನ ಮಟ್ಟದಲ್ಲಿರುವಾಗ (ದೀನ ಹೃದಯ ಉಳ್ಳವರಾಗಿರುವಾಗ) ಅದಕ್ಕಿಂತಲೂ ಕೆಳಗೆ ನಿಮ್ಮನ್ನು ಯಾರೂ ತಳ್ಳಲು ಸಾಧ್ಯವಿಲ್ಲ! ಆಗ ಅವರಿಗೆ ನಿಮ್ಮನ್ನು ನೋಯಿಸುವ ಅವಕಾಶವೂ ಇರುವುದಿಲ್ಲ. ನಿಮ್ಮನ್ನು ಯಾರಾದರೂ

ಕೆಳಗಿಳಿಯಲು ಹೇಳಿದರೆ, ನಿಮ್ಮ ಹೃದಯವು ಅದಕ್ಕಿಂತಲೂ ದೀನ ಸ್ಥಿತಿಯಲ್ಲಿ ಇರುವಾಗ ನಿಮಗೆ ಈ ಸಂಗತಿಯಿಂದ ನೋವು ಉಂಟಾಗಲು ಸಾಧ್ಯವಿಲ್ಲ.

ಕ್ರೈಸ್ತ ನಾಯಕರಾಗಿರುವ ನಮಗೆ, ನಮ್ಮ ಅಹಂಕಾರಕ್ಕೆ ಏಟಾಗುವಾಗ ನಮಗೆ ಬಲು ಬೇಗ ನೋವಾಗುತ್ತದೆ. ಜನರು ನಮ್ಮ ಬಿರುದುಗಳನ್ನು ಸಂಬೋಧಿಸಿ ನಮ್ಮನ್ನು ಕರೆಯಬೇಕು ಎಂದು ನಾವು ನಿರೀಕ್ಷಿಸುತ್ತೇವೆ. ಆದರೆ ಯಾರಾದರೂ ಹಾಗೆ ಮಾಡದಿದ್ದಾಗ ನಮಗೆ ನೋವು ಉಂಟಾಗುತ್ತದೆ. ಕೂಟಗಳಲ್ಲಿ ನಮ್ಮನ್ನು ಯಾರಾದರೂ ಕರೆದು ಮುಂದಿನ ಸ್ಥಾನದಲ್ಲಿ ಕೂರಿಸಬೇಕು ಎಂದು ನಾವು ನಿರೀಕ್ಷಿಸುತ್ತೇವೆ. ಹಾಗೆ ಆಗದಿದ್ದಾಗ ನಮಗೆ ನೋವು ಉಂಟಾಗುತ್ತದೆ. ನಮ್ಮನ್ನು ಜನರು ಗುರುತಿಸಬೇಕು ಹಾಗೂ ನಮ್ಮ ಎಲ್ಲಾ ಸಾಧನೆಗಳನ್ನು ಜನರು ಹೇಳಬೇಕು ಎಂದು ನಾವು ನಿರೀಕ್ಷಿಸುತ್ತೇವೆ ಆದರೆ ಹಾಗೆ ಆಗದಿರುವಾಗ ನಮಗೆ ನೋವು ಉಂಟಾಗುತ್ತದೆ. ಅಹಂಕಾರವು ನಮ್ಮ ಹೃದಯಗಳನ್ನು ಆಳಲು ನಾವು ಬಿಡುವಾಗ ಈ ಎಲ್ಲಾ ನೋವುಗಳು ನಮ್ಮ ಹೃದಯದೊಳಕ್ಕೆ ಪ್ರವೇಶಿಸುತ್ತವೆ. ಅದಕ್ಕೆ ಬದಲಾಗಿ ಯೇಸುವಿನಂತೆಯೇ ನಾವು ನಮ್ರತೆಯಿಂದಲೂ, ದೀನ ಹೃದಯವುಳ್ಳವರಾಗಿಯೂ ನಡೆಯುವಾಗ ನಮ್ಮನ್ನು ಇತರರು ಗೌರವಿಸಬೇಕು, ಶ್ರೇಷ್ಠ ಉಪಚಾರ ನೀಡಬೇಕು ಎಂಬ ನಿರೀಕ್ಷೆಯೂ ನಮಗಿರುವುದಿಲ್ಲ. ಆದುದರಿಂದ ನಮಗೆ ನೋವುಂಟಾಗುವ ಅವಕಾಶವೇ ಇರುವುದಿಲ್ಲ.

ನಾವು ನಮ್ಮ ಹೃದಯದಲ್ಲಿ ತೆಗೆದುಕೊಳ್ಳಬೇಕಾದ ಎರಡು ಇತರ ಪ್ರಮುಖ ನಿರ್ಧಾರಗಳು:

1) ನೋವನ್ನು ಹೃದಯದೊಳಗೆ ಇಟ್ಟುಕೊಂಡು ಕಾರ್ಯ ಮಾಡಬಾರದು.
2) ಪ್ರೀತಿಯಲ್ಲಿ ನಡೆಯುವ ಆಯ್ಕೆಯನ್ನು ಮಾಡಬೇಕು.

ಈ ಎರಡು ವಿಷಯಗಳನ್ನೂ ಒಂದೊಂದಾಗಿ ಮುಂದಿನ ಎರಡು ಅಧ್ಯಾಯಗಳಲ್ಲಿ ನಾವು ನೋಡೋಣ.

## ಪುನರಾವಲೋಕನ

1) ನಮ್ಮ ಹೃದಯದೊಳಗೆ ನೋವು ಪ್ರವೇಶಿಸದಂತೆ ಅದನ್ನು ಕಾಪಾಡಿಕೊಳ್ಳುವುದು ಯಾಕೆ ಪ್ರಾಮುಖ್ಯ?

2) ನಿಮಗೆ ಬಂದ ನೋವುಗಳನ್ನು ನೀವು ಬಿಟ್ಟು ಬಿಟ್ಟಿದ್ದೀರೋ? ನೀವು ದೇವರಲ್ಲಿ ಪ್ರಾರ್ಥಿಸಿ ನಿಮ್ಮೊಳಗೆ ಹಿಡಿದಿಟ್ಟುಕೊಂಡಿರುವ ನೋವುಗಳನ್ನು ತೆಗೆದುಹಾಕಿ ನಿಮ್ಮ ಹೃದಯವನ್ನು ಆತನು ಶುದ್ಧೀಕರಿಸುವಂತೆ ಆತನನ್ನು ಬೇಡಿಕೊಳ್ಳುವ ಅವಶ್ಯಕತೆಯೂ ನಿಮಗೆ ಇದೆಯೋ?

3) ನಿಮಗೆ ನೋವುಂಟಾದಾಗ ಈ ಸಂಗತಿಗಳನ್ನು ಮಾಡಿರಿ. ರೋಮಾಪುರದವರಿಗೆ 12:17–21ರಲ್ಲಿ ಪಟ್ಟಿ ಮಾಡಿರುವ ''ಮೊದಲ ಮೂರು ಪ್ರತಿಕ್ರಿಯೆಗಳನ್ನು'' ಪುನರಾವಲೋಕನ ಮಾಡಿ.

4) ನಿಮ್ಮ ಅಹಂಕಾರಕ್ಕೆ ಯಾವ ವಿಧದಿಂದಲೂ ಏಟು ಬೀಳದ ರೀತಿಯಲ್ಲಿ ನೀವು ಯೇಸುವಿನಂತೆ ಉದ್ದೇಶಪೂರ್ವಕವಾಗಿ ಯಾವ ರೀತಿಯಲ್ಲಿ ''ನಮ್ರ ಹಾಗೂ ದೀನ ಹೃದಯವನ್ನು'' ಕಾಪಾಡಿಕೊಳ್ಳಬಹುದು ಹಾಗೂ ನಿಮಗೆ ನೋವುಂಟಾಗುವ ಅವಕಾಶವೇ ಇಲ್ಲದಂತಹ ಈ ಸ್ಥಿತಿಯನ್ನು ಹೇಗೆ ಕಾಪಾಡಿಕೊಳ್ಳಬಹುದು?

# 4
# ನೋವಿನಲ್ಲಿ ಕಾರ್ಯ ಮಾಡಬೇಡಿ

ಹಿಂದಿನ ಅಧ್ಯಾಯದಲ್ಲಿ ನಮಗೆ ನೋವುಂಟಾದಾಗ ನಾವು ಮಾಡಬಹುದಾದ ಹೃದಯದ ಮುಖ್ಯವಾದ ಮೂರು ಆಯ್ಕೆಗಳ ಬಗ್ಗೆ ಚರ್ಚಿಸಿದೆವು:

1) ಬಿಟ್ಟುಬಿಡುವುದು.
2) ರೋಮಾಪುರದವರಿಗೆ 12:17-21 ಕ್ಕೆ ಅನುಸಾರವಾಗಿ ಪ್ರತಿಕ್ರಿಯೆ ನೀಡುವುದು ಹಾಗೂ ದೇವರು ನಿಮ್ಮನ್ನು ಸಮರ್ಥಿಸುವುದಕ್ಕಾಗಿ ಆತನಿಗೆ ಬಿಟ್ಟುಕೊಡುವುದು.
3) ಅಹಂಕಾರವು ನಿಮ್ಮ ಹೃದಯವನ್ನು ಆಳಲು ಬಿಡದಿರುವುದು.

ಈ ಅಧ್ಯಾಯವು ನಮಗೆ ನೋವುಂಟಾದಾಗ ನಾವು ತೆಗೆದುಕೊಳ್ಳಬಹುದಾದ ಹೃದಯದ ನಾಲ್ಕನೆಯ ಪ್ರಾಮುಖ್ಯವಾದ ಆಯ್ಕೆಯ ಬಗ್ಗೆ ಮಾತನಾಡುತ್ತದೆ. ನಾವು ನೋವು ತುಂಬಿದ ಹೃದಯದಿಂದ ಕಾರ್ಯವನ್ನು ಮಾಡದಿರಲು ಉದ್ದೇಶಪೂರ್ವಕವಾದ ಆಯ್ಕೆಯನ್ನು ಮಾಡಬೇಕು. ಇದಕ್ಕೆ ಸ್ವ-ನಿಯಂತ್ರಣ ಬೇಕು.

## ಎರಡು ತಪ್ಪುಗಳು ಒಂದನ್ನು ಸರಿಪಡಿಸಲಾರವು

**ಪ್ರಸಂಗಿ 10:4**
**ದೊರೆಯು ನಿನ್ನ ಮೇಲೆ ಸಿಟ್ಟುಗೊಂಡರೆ ಉದ್ಯೋಗವನ್ನು ಬಿಡಬೇಡ; ತಾಳ್ಮೆಯು ದೊಡ್ಡ ದೋಷಗಳನ್ನು ಅಡಗಿಸುತ್ತದಲ್ಲವೆ.**

ಇಂದಿನ ದಿನಗಳ ದೃಶ್ಯವನ್ನು ಊಹಿಸಿಕೊಳ್ಳೋಣ. ಒಂದು ವೇಳೆ ನೀವು ಯಾವುದಾದರೂ ಕೆಲಸದಲ್ಲಿ ತಪ್ಪು ಮಾಡಿದಿರಿ ಎಂದು ಊಹಿಸಿಕೊಳ್ಳೋಣ. ಒಂದು ವೇಳೆ ಅದು ಒಂದು ಸಣ್ಣ ಕೆಲಸವಾಗಿರಬಹುದು. ಅದನ್ನು ನೀವು ಮಾಡಬೇಕಾಗಿತ್ತು ಆದರೆ ಮಾಡಲಿಲ್ಲ ಅಂದುಕೊಳ್ಳಿ. ನಿಮ್ಮ ಮೇಲಧಿಕಾರಿ ಅಥವಾ ದಣಿಯು ನಿಮ್ಮ ಮೇಲೆ ಕೋಪಗೊಂಡಿರಬಹುದು, ಹಾಗೂ ಆತನು ತನ್ನ ಕೋಪವನ್ನು

ಕೆಲವು ಕೆಟ್ಟ ಇಮೇಲ್‌ಗಳ ಮೂಲಕವಾಗಿ ಅಥವಾ ಎದುರಾದಾಗ ಕೆಟ್ಟ ಪದಗಳ ಮೂಲಕವಾಗಿ ಅಥವಾ ನಿಮಗೆ ಕೊಡುವ ಕೀಳುಮಟ್ಟದ ರೇಟಿಂಗ್‌ಗಳಿಂದಾಗಲಿ ಅಥವಾ ಅವರ ಮೇಲಧಿಕಾರಿಗಳಿಗೆ ನಿಮ್ಮ ಕುರಿತಾದ ತನ್ನ ಬೇಸರವನ್ನು ತಿಳಿಸುವದರ ಮೂಲಕವಾಗಿ ವ್ಯಕ್ತಪಡಿಸಬಹುದು. ಆಗ ಖಂಡಿತವಾಗಿಯೂ ಅವರ ಈ ಪ್ರತಿಕ್ರಿಯೆಯಿಂದ ನಿಮಗೆ ನೋವುಂಟಾಗುತ್ತದೆ. ಅವರ ವರ್ತನೆ ಅತಿಯಾಯಿತು, ಕೆಲಸ ಬಿಡೋಣವೆಂದು ನಿಮಗೆ ಅನಿಸುತ್ತದೆ. ಹೊರಗೆ ನಡೆಯೋಣ ಎಂದೆನಿಸುತ್ತದೆ. ಪ್ರತಿಭಟಿಸೋಣ ಎಂದೆನಿಸುತ್ತದೆ. ಅವರು ನನಗೆ ಹೀಗೆ ಮಾಡಿದ್ದು ಸರಿಯಲ್ಲ ಎಂದು ಅವರೇ ಅರ್ಥಮಾಡಿಕೊಳ್ಳಬೇಕು, ಎಂದು ನೀವು ಈ ರೀತಿ ಪ್ರತಿಕ್ರಿಯಿಸಬಹುದು. ಆದರೆ ಇನ್ನೊಂದು ಕಡೆಯಲ್ಲಿ ದೇವರ ವಾಕ್ಯವು ''*ಉದ್ಯೋಗವನ್ನು ಬಿಡಬೇಡ,*'' ನಿನ್ನ ಉದ್ಯೋಗವನ್ನು ಬಿಡಬೇಡ, ನಿನ್ನೊಳಗಿರುವ ನೋವಿನ ಭಾವನೆಯಿಂದ ನೀನೆಂದಿಗೂ ಪ್ರತಿಕ್ರಿಯಿಸಬೇಡ ಎಂದು ನಮಗೆ ಪ್ರೋತ್ಸಾಹಿಸುತ್ತದೆ. ಇಂತಹ ಸಂದರ್ಭಗಳಲ್ಲಿ ಶಾಂತವಾಗಿರುವುದು, ಮೃದುವಾದ ವರ್ತನೆ, ಅಧೀನರಾಗಿ ಇರುವುದು, ಹಾಗೂ ನಿಮ್ಮ ಭಾವನೆಗಳನ್ನು ಹಿಡಿದಿಟ್ಟುಕೊಳ್ಳುವುದು ಇವೆಲ್ಲವುಗಳು ವಿಷಯಗಳನ್ನು ತಣ್ಣಗಾಗುವಂತೆ ಮಾಡುತ್ತದೆ.

## ನೋವು ತುಂಬಿದ ಹೃದಯ ಅದು ಗಾಯವಾದ ಹೃದಯವಾಗಿದೆ

ನೋವು ತುಂಬಿದ ಹೃದಯವು ಒಂದು ಗಾಯವಾದ ಹೃದಯವಾಗಿದೆ. ನೋವು ಒಳಗಿರುತ್ತದೆ. ಆತ್ಮವು ''ಮುರಿಯಲ್ಪಟ್ಟಿರುತ್ತದೆ.''

**ಜ್ಞಾನೋಕ್ತಿಗಳು 17:22**
**ಹರ್ಷಹೃದಯವು ಒಳ್ಳೇ ಔಷಧ, ಕುಗ್ಗಿದ ಮನದಿಂದ (ಮುರಿದ ಆತ್ಮದಿಂದ) ಒಣಮೈ.**

ಮುರಿದ ಆತ್ಮವು ಎಲುಬುಗಳನ್ನು ಒಣಗಿಸುತ್ತದೆ. ಅದರ ಅರ್ಥ ಮುರಿದ ಆತ್ಮವು ''ನಿಮ್ಮೊಳಗಿರುವ ಜೀವವನ್ನು ಹೀರಿಕೊಂಡು,'' ನಿಮ್ಮನ್ನು ಬರಿದುಮಾಡಿ ನಿಮ್ಮನ್ನು ನೆಲಸಮ ಮಾಡುತ್ತದೆ.

**ಜ್ಞಾನೋಕ್ತಿಗಳು 18:14**
**ಆತ್ಮವು ವ್ಯಾಧಿಯನ್ನು ಸಹಿಸಬಲ್ಲದು, ಆತ್ಮವೇ ನೊಂದರೆ ಸಹಿಸುವವರು ಯಾರು?**

ಅಂತರ್ಯದ ಮನುಷ್ಯನೇ ನಮ್ಮ ಕಷ್ಟದ ಸಮಯಗಳಲ್ಲಿ ಹಾಗೂ ರೋಗದ ಸಮಯಗಳಲ್ಲಿ ನಮ್ಮನ್ನು ಎತ್ತಿಹಿಡಿಯುವನಾಗಿದ್ದಾನೆ. ಆದರೆ ಅಂತರ್ಯದ

ಮನುಷ್ಯನೇ ನೊಂದರೆ ಆತನಿಗೆ ಗಾಯವಾಗಿ ಆತನು ಮುರಿಯಲ್ಪಟ್ಟರೆ ಇಂತಹ ಕಠಿಣವಾದ ಪರಿಸ್ಥಿತಿಯಲ್ಲಿ ಓರ್ವ ವ್ಯಕ್ತಿಗೆ ಆಧಾರವಾಗಿರುವಂತದ್ದು ಯಾವದೂ ಇರುವದಿಲ್ಲ.

ಆದುದರಿಂದ, ನಾವು ಈ ನೋವನ್ನು ಸ್ವೀಕರಿಸಿ ಅದು ನಮ್ಮ ಹೃದಯದೊಳಗೆ ಪ್ರವೇಶಿಸಲು ಬಿಟ್ಟರೆ ನಾವು ಬಲಹೀನ ಸ್ಥಿತಿಯಲ್ಲಿದ್ದೇವೆ, ನಾವು ಬಲಾಢ್ಯರಲ್ಲ ಎಂದರ್ಥ. ನಾವು ಎಲ್ಲ ವಿಷಯಗಳಲ್ಲೂ ಕೆಳಗಿನ ಮಟ್ಟದಲ್ಲಿ ಇದ್ದೇವೆಯೇ ಹೊರತು, ಅತ್ಯುತ್ತಮವಾದದ್ದನ್ನು ನೀಡಲು ನಮ್ಮಿಂದ ಅಸಾಧ್ಯವಾಗಿರುತ್ತದೆ.

ನಾವು ತಪ್ಪಾದ ನಿರ್ಧಾರಗಳನ್ನು ಹಾಗೂ ಕೀಳು ಆಯ್ಕೆಗಳನ್ನು ಮಾಡುವ ಒಲವುಳ್ಳವರಾಗಿರುತ್ತೇವೆ. ಹೆಚ್ಚಾಗಿ ನಾವು ನಮ್ಮ ಒಳಗಿರುವ ನೋವುಗಳ ನಿಮಿತ್ತ ಕುರುಡರಾಗಿ ಬಿಡುತ್ತೇವೆ. ಸರಿಯಾಗಿ ತೀರ್ಪು ಮಾಡುವ ನಮ್ಮ ಶಕ್ತಿಯು ನಮ್ಮ ಒಳಗಿರುವ ನೋವಿನ ನಿಮಿತ್ತ ಮಸುಕಾಗಿ ಬಿಡುತ್ತದೆ.

ಈ ನೋವಿನ ಸ್ಥಿತಿಯಲ್ಲಿದ್ದು ಕೊಂಡು ನಾವು ಕಾರ್ಯಗಳನ್ನು ಮಾಡುವಾಗ ನಾವು ಇತರರನ್ನು ನೋಯಿಸುವ ಮನೋಭಾವವುಳ್ಳವರಾಗಿರುತ್ತೇವೆ. ನೋವಿಗೊಳಗಾದ ಜನರೇ ಇತರರನ್ನು ನೋಯಿಸುವರಾಗಿರುತ್ತಾರೆ. ಕೆಲವು ಬಾರಿ ಇದು ತಮ್ಮನ್ನು ರಕ್ಷಿಸಿಕೊಳ್ಳುವ ಒಂದು ವಿಧಾನವಾಗಿ ಮಾಡಲ್ಪಡುತ್ತದೆ. ಆದರೆ ಅದೇನೇ ಇದ್ದರೂ ನಾವು ನಮಗೆ ಆಪ್ತರಾಗಿರುವ ಜನರಿಗೆ ನೋವುಂಟುಮಾಡುವವರಾಗಿದ್ದೇವೆ.

ಆದ್ದರಿಂದ, ಅಪರಾಧ ಮಾಡದಿರುವುದು ಉತ್ತಮ. ಆದಾಗ್ಯೂ, ನೀವು ಮನನೊಂದಿದ್ದರೆ, ಸ್ವಯಂ ಸಂಯಮವನ್ನು ವ್ಯಾಯಾಮ ಮಾಡಿ ಮತ್ತು ಮನನೊಂದ ಹೃದಯದಿಂದ ಕಾರ್ಯನಿರ್ವಹಿಸದಿರಲು ಆಯ್ಕೆ ಮಾಡಿ. ದೇವರು ನಿಮ್ಮನ್ನು ಗುಣಪಡಿಸಲು ಮತ್ತು ಅಪರಾಧದ ನಿಮ್ಮ ಹೃದಯವನ್ನು ಬಿಡಲು, ಕ್ಷಮಿಸಲು, ತೆರವುಗೊಳಿಸಲು ಮತ್ತು ಶುದ್ಧೀಕರಿಸಲು ಸಹಾಯ ಮಾಡಲಿ. ನಂತರ, ಮುಂದೆ ಸರಿಸಿ.

## ನೋವು ಕಹಿ ಭಾವನೆಯನ್ನು ಹುಟ್ಟುಹಾಕುತ್ತದೆ

ನಾವು ನಮ್ಮ ಹೃದಯದ ಒಳಗೆ ಇರುವಂತಹ ನೋವಿನ ಕುರಿತಾಗಿ ಸರಿಯಾಗಿ ವ್ಯವಹರಿಸದೆ ಇದ್ದರೆ ಅದು ನಮ್ಮೊಳಗೆ ತಪ್ಪು ಭಾವನೆಗಳನ್ನು, ಕ್ಷಮಾಪಣೆ ಇಲ್ಲದ ಗುಣವನ್ನು ಮತ್ತು ಕೋಪವನ್ನು ದ್ವೇಷವನ್ನು ಉಂಟುಮಾಡುತ್ತದೆ. ಹಾಗೂ

ನಮಗೆ ನೋವುಂಟು ಮಾಡಿದ ವ್ಯಕ್ತಿಯ (ಇಲ್ಲವೇ ಜನರ ) ಕುರಿತಾಗಿ ನಾವು ಕಹಿ ಭಾವನೆ ಉಳ್ಳವರಾಗುತ್ತೇವೆ.

ನಮ್ಮ ಹೃದಯಗಳಲ್ಲಿ ಕಹಿ ಭಾವನೆಯನ್ನು ಇಟ್ಟುಕೊಳ್ಳುವುದು ಅಂದರೆ ಏನು?

**ಇಬ್ರಿಯರಿಗೆ 12:14,15**
**14 ಎಲ್ಲರ ಸಂಗಡ ಸಮಾಧಾನದಿಂದಿರುವದಕ್ಕೂ ಪರಿಶುದ್ಧತೆಯನ್ನು ಹೊಂದುವದಕ್ಕೂ ಪ್ರಯತ್ನಮಾಡಿರಿ; ಪರಿಶುದ್ಧತೆಯಿಲ್ಲದೆ ಯಾವನೂ ಕರ್ತನನ್ನು ಕಾಣುವದಿಲ್ಲ.**
**15 ನಿಮ್ಮಲ್ಲಿ ಯಾವನಾದರೂ ದೇವರ ಕೃಪೆಗೆ ತಪ್ಪಿ ಹಿಂಜರಿಯದಂತೆ ಯಾವ ವಿಷವುಳ್ಳ (ಕಹಿಭಾವನೆಯೆಂಬ) ಬೇರೂ ನಿಮ್ಮಲ್ಲಿ ಚಿಗುರಿ ಅಸಮಾಧಾನವನ್ನು ಹುಟ್ಟಿಸಿ ಸಭೆಯವರನ್ನು ಕೆಡಿಸದಂತೆ.**

ಕಹಿ ಭಾವನೆಯು ಒಂದು ಬೇರಿನ ಹಾಗಿದೆ. ಅದನ್ನು ನಾವು ಗಮನಿಸದಿದ್ದಲ್ಲಿ ಅದು ಬೆಳೆದು ನಮಗೆ ಸಕಲ ವಿಧವಾದ ಸಮಸ್ಯೆಗಳನ್ನು ಉಂಟುಮಾಡುತ್ತದೆ. ಅದು ನಮ್ಮ ಮೂಲಕ ಇತರರ ಮೇಲೂ ಪ್ರಭಾವ ಬೀರುತ್ತದೆ. ನಾವು ಅನುಭವಿಸುವಂತವುಗಳನ್ನು ಅವರೂ ಅನುಭವಿಸುವಂತೆ ಮಾಡುತ್ತದೆ. ಅದನ್ನು ಗಮನಿಸದಿದ್ದಲ್ಲಿ, ಈ ಕಹಿ ಭಾವನೆಯು ಸಾಂಕ್ರಾಮಿಕವಾಗಿ ಎಲ್ಲೆಡೆ ಹರಡಿಕೊಳ್ಳುತ್ತದೆ. ನಮ್ಮ ಹಾಗೆ ಇತರರೂ ಕಹಿ ಭಾವನೆ ಉಳ್ಳವರಾಗುತ್ತಾರೆ.

ಇಬ್ರಿಯರಿಗೆ 12:15 ರಲ್ಲಿ ಕಹಿ ಭಾವನೆಯ ಕುರಿತಾದ ಪೂರ್ವ ಎಚ್ಚರಿಕೆಯನ್ನು ದೇವರ ಕೃಪೆಗೆ ಹಿಂಜರಿಯದಂತೆ ಎಂಬ ಎಚ್ಚರಿಕೆಯೊಡನೆ ಸೇರಿಸಲಾಗಿದೆ. ದೇವರು ಸಮೃದ್ಧಿಯಾದ ಕೃಪೆಯಿಂದ ತುಂಬಿದಾತನಾಗಿದ್ದಾನೆ. ಆತನಲ್ಲಿ ಎಲ್ಲರೂ ಹೊಂದಿಕೊಳ್ಳಬಹುದಾದ ಅಳೆಯಲಾಗದ ಉಕ್ಕಿ ಹರಿಯುವ ಕೃಪೆಯು ಲಭ್ಯವಿದೆ. ಹೀಗಿದ್ದರೂ ನಮ್ಮ ಹೃದಯಗಳಲ್ಲಿ ಕಹಿ ಭಾವನೆ ಇದ್ದರೆ ಅದು ದೇವರು ನಮಗಾಗಿ, ನಮ್ಮಲ್ಲಿ, ಹಾಗೂ ನಮ್ಮ ಮೂಲಕ ತನ್ನ ಅದ್ಭುತವಾದ ಕೃಪೆಯಿಂದ ಏನನ್ನು ಮಾಡಬಲ್ಲನೋ, ಅದನ್ನು ನಾವು ಹೊಂದಿಕೊಳ್ಳದಂತೆ ಅಡ್ಡಿ ಮಾಡುತ್ತದೆ. ಕಹಿ ಭಾವನೆಯನ್ನು ನಾವು ಸರಿಯಾಗಿ ಪರೀಕ್ಷಿಸದಿದ್ದಲ್ಲಿ ಅದು ನಮ್ಮನ್ನು ಕ್ಷಮಾಪಣೆ ಇಲ್ಲದ ಗುಣಕ್ಕೆ ನಡೆಸುತ್ತದೆ ಮತ್ತು ಅದು ನಮ್ಮ ನಂಬಿಕೆಗೆ ಅಡ್ಡಿ ಮಾಡುತ್ತದೆ (ಮಾರ್ಕನು 11:22-25).

ಕಹಿ ಭಾವನೆಯನ್ನು ನಾವು ಸರಿಯಾಗಿ ಪರೀಕ್ಷಿಸದಿದ್ದಲ್ಲಿ ಅದು ನಮ್ಮಲ್ಲಿ ದ್ವೇಷವನ್ನು ಹುಟ್ಟುಹಾಕುತ್ತದೆ. ದ್ವೇಷವು ನಮ್ಮನ್ನು ಕುರುಡರನ್ನಾಗಿ ಮಾಡುತ್ತದೆ

(1 ಯೋಹಾನನು 2:9-11). ನಾವು ಕತ್ತಲೆಯಲ್ಲಿ ಇರುವವರಂತೆ ಎಲ್ಲಿಗೋ ಹೋಗುತ್ತಿರುವಂತೆ, ಆದರೆ ಎಲ್ಲಿಗೆ ಹೋಗುತ್ತಲಿದ್ದೇವೆ ಎಂದು ಅರಿಯದವರಂತೆ ಹೋಗುತ್ತಲೇ ಇರುತ್ತೇವೆ, ಯಾಕಂದರೆ ದ್ವೇಷವು ನಮ್ಮನ್ನು ಕುರುಡರನ್ನಾಗಿ ಮಾಡಿರುತ್ತದೆ.

ದ್ವೇಷವು ಕೊಲೆಗೆ ಸಮಾನವಾಗಿದೆ (1 ಯೋಹಾನನು 3:15). ನಾವು ಕಹಿ ಭಾವನೆಯಲ್ಲಿ ಕಾರ್ಯವೆಸಗುವಾಗ, ಹೆಚ್ಚಾಗಿ ಕೊಲೆ ಮಾಡುವ ಉಪಾಯವನ್ನು ಹುಡುಕುತ್ತೇವೆ. ಆಗ ನಮಗೆ ನೋವು ಕೊಟ್ಟ ವ್ಯಕ್ತಿಯ ಅಥವಾ ವ್ಯಕ್ತಿಗಳ ವ್ಯಕ್ತಿತ್ವವನ್ನು, ಅವರ ಗೌರವವನ್ನು, ಅವರ ಕೀರ್ತಿಯನ್ನು, ಮಾನವನ್ನು ಮಣ್ಣುಪಾಲು ಮಾಡುವ ಮಟ್ಟಿಗೂ ಹೋಗುವುದಕ್ಕೆ ಹಿಂಜರಿಯುವುದಿಲ್ಲ. ಕೆಲವು ಬಾರಿ ನಾವು ಈ ಸಂಗತಿಗಳನ್ನು ಎಲ್ಲರಿಗೂ ಸಮಾನವಾಗಿ ಅನ್ವಯಿಸಿ ನೋಡುತ್ತೇವೆ. ನಾವು ''ಎಲ್ಲಾ ಮನುಷ್ಯರು ಹೀಗೆಯೇ'' ಅನ್ನುತ್ತೇವೆ. ಹೃದಯದೊಳಗೆ ಹೊಕ್ಕು ಕುಳಿತ ಆ ಒಂದು ನೋವು ಅಂತರ್ಯದಲ್ಲಿ ಕಹಿ ಭಾವನೆಯನ್ನು ಹುಟ್ಟು ಹಾಕಿ ಎಲ್ಲಾ ಮನುಷ್ಯರ ಕಡೆಗೂ ಸಮಾನವಾದ ದ್ವೇಷವನ್ನು ಕಾರುತ್ತದೆ.

ಇಂತಹ ಎಲ್ಲಾ ನಕಾರಾತ್ಮಕವಾದ ಭಾವನೆಗಳನ್ನು ನಮ್ಮ ಹೃದಯದಿಂದ ತೆಗೆದುಹಾಕದಿದ್ದರೆ ಅವುಗಳು ಕೇವಲ ನಮಗೆ ತೊಂದರೆ ಕೊಡುತ್ತಾ ಕ್ರಮೇಣ ನಮಗೆ ಹಾನಿಯನ್ನು ಉಂಟುಮಾಡುತ್ತವೆ.

## ನೋವನ್ನು ವಿತರಿಸಬೇಡಿ

ಇಬ್ರಿಯರಿಗೆ 12:15 ರಲ್ಲಿ ನಾವು ಕಹಿ ಭಾವನೆಯನ್ನು ನಿಭಾಯಿಸದಿದ್ದಲ್ಲಿ ಅವುಗಳು ನಮ್ಮ ಹೃದಯದಿಂದ ನಮ್ಮ ಸುತ್ತಲಿರುವ ಇತರರ ಹೃದಯಕ್ಕೆ ಹರಿದು ಹೋಗುತ್ತದೆ ಎಂದು ಹೇಳಲ್ಪಟ್ಟಿದೆ.

ನಾವು ನಮ್ಮ ನೋವುಗಳನ್ನು ಇಟ್ಟುಕೊಂಡು ನಮ್ಮ ಜೀವನದಲ್ಲಿ ಕಾರ್ಯವೆಸಗುತ್ತಿದ್ದರೆ ಇತರರ ಜೀವನಕ್ಕೂ ನಾವು ನೋವಿನ ಭಾವನೆಗಳನ್ನು ಹರಡಲು ಹಾಗೂ ಹಂಚಲು ಆರಂಭಿಸಿದಂತಾಗುತ್ತದೆ. ನಾವು ಅವರಿಗೆ ಹೇಳುವ ಸಂಗತಿಗಳು ಅವರ ಆಲೋಚನೆ ಅವರ ಭಾವನೆ ಅವರ ತರ್ಕದ ಹಾಗೂ ದೃಷ್ಟಿಕೋನದ ಮೇಲೂ ಪರಿಣಾಮ ಬೀರಿ ಅವುಗಳನ್ನು ಮಂಕು ಮಾಡುತ್ತದೆ.

**ರೋಮಾಪುರದವರಿಗೆ 16:17**
**ಪ್ರಿಯರೇ, ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಭೇದಗಳನ್ನೂ, ವಿಘ್ನಗಳನ್ನೂ** (ಗ್ರೀಕ್ ಪದ ಸ್ಕಾಂಡಲನ್) **ನಿಮ್ಮಲ್ಲಿ ಉಂಟುಮಾಡುವವರನ್ನು ಗುರುತಿಸಿ ಅವರನ್ನು ಬಿಟ್ಟು ದೂರ ಹೋಗಿರಿ ಎಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ.**

## ಯಾರಿಗೂ ತಡೆಯೊಡ್ಡುವದಿಲ್ಲ ಹಾಗೂ ಯಾರನ್ನೂ ನೋಯಿಸುವುದಿಲ್ಲ ಎಂಬ ಸ್ಥಿರ ಸಂಕಲ್ಪವನ್ನು ಮಾಡಿ

**ರೋಮಾಪುರದವರಿಗೆ 14:10,13**
**10 ತಿನ್ನದವನೇ, ನಿನ್ನ ಸಹೋದರನ ವಿಷಯವಾಗಿ ನೀನು ತೀರ್ಪು ಮಾಡುವುದೇನು? ತಿನ್ನುವವನೇ, ನಿನ್ನ ಸಹೋದರನನ್ನು ನೀನು ಹೀನೈಸುವುದೇನು? ನಾವೆಲ್ಲರೂ ದೇವರ ನ್ಯಾಯಾಸನದ ಮುಂದೆ ನಿಲ್ಲಬೇಕು.**
**13 ಆದಕಾರಣ, ಇನ್ನು ಮೇಲೆ ಒಬ್ಬರ ವಿಷಯದಲ್ಲೊಬ್ಬರು ತೀರ್ಪುಮಾಡದೆ ಇರೋಣ. ಅದಕ್ಕೆ ಬದಲಾಗಿ ಸಹೋದರನ ಎದುರಿಗೆ ಅಡ್ಡಿಯನ್ನಾಗಲಿ,** (ಗ್ರೀಕ್ ಪದ ಪ್ರೊಸ್ಕೊಮ್ಮ) **ಅಡೆತಡೆಯನ್ನಾಗಲಿ ಹಾಕಬಾರದೆಂದು ತೀರ್ಮಾನಿಸಿಕೊಳ್ಳಿರಿ.**

ರೋಮಾಪುರದವರಿಗೆ ಬರೆದ ಪತ್ರಿಕೆ ಅಧ್ಯಾಯ 14 ರಲ್ಲಿ ಪೌಲನು ವಿಭಿನ್ನ ವಿಶ್ವಾಸಿಗಳ ಆಹಾರದ ಬಗ್ಗೆ ಹಾಗೂ ವಿಶೇಷ ದಿವಸಗಳ ಹಾಗೂ ಇನ್ನೂ ಕೆಲವು ಸಂಗತಿಗಳ ಬಗ್ಗೆ ವಿಭಿನ್ನವಾದ ದೃಷ್ಟಿಕೋನ ಹೊಂದಿರಬಹುದು ಎಂಬ ವಾಸ್ತವತೆಯ ಕುರಿತಾಗಿ ಮಾತನಾಡುತ್ತಿದ್ದಾನೆ. ಅನಂತರ ಆತನು ವಿಶ್ವಾಸಿಗಳಾದ ನಾವು ಈ ಎಲ್ಲ ಸಂಗತಿಗಳಲ್ಲಿ ಒಬ್ಬರನ್ನೊಬ್ಬರು ತೀರ್ಪು ಮಾಡಬಾರದು ಎಂಬುದಾಗಿ ನಮ್ಮನ್ನು ಗದರಿಸುತ್ತಿದ್ದಾನೆ. ಹೀಗಿರಲಾಗಿ ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರ ಕೊಡಬೇಕು ಎಂಬುದನ್ನು ಅರಿತವರಾಗಿ ನಾವು ಒಬ್ಬರನ್ನೊಬ್ಬರು ತೀರ್ಪು ಮಾಡಬಾರದು. ಈ ಸ್ವಾತಂತ್ರ್ಯ ನಮಗೆ ಇದ್ದರೂ ನಾವು ಇನ್ನೊಬ್ಬ ವಿಶ್ವಾಸಿಯು ಬೀಳುವಂತೆ ಆತನ ಮುಂದೆ ತಡೆಯೊಡ್ಡಬಾರದು ಅಥವಾ ಆತನು ಎಡವಿ ಪಾಶಕ್ಕೆ ಸಿಲುಕುವಂತೆ ಹಾಗೂ ಆತನು ಬೀಳುವಂತಹ ಯಾವ ಕಾರ್ಯವನ್ನೂ ಮಾಡಬಾರದು.

ರೋಮಾಪುರದವರಿಗೆ 14:13 ರಲ್ಲಿ ''ಅಡ್ಡಿ'' ಎನ್ನುವ ಪದಕ್ಕೆ 'ಪ್ರೊಸ್ಕೊಮ್ಮ' ಎಂಬ ಗ್ರೀಕ್ ಪದ ಉಪಯೋಗವಾಗಿದೆ. ಅದರ ಅರ್ಥ ''ಓರ್ವ ವ್ಯಕ್ತಿಯು ಕಾಲು ತಗಲಿ ಎಡವಬಹುದಾದ ಒಂದು ತಡೆ ಅಥವಾ ಅಡ್ಡಿ'' ಎಂಬುದಾಗಿದೆ. ''ಅಡೆತಡೆ'' ಎಂಬ ಪದವು ಗ್ರೀಕ್ ಪದವಾದ 'ಸ್ಕ್ಯಾಂಡಲ್' ಪದದಿಂದ ಬಂದಿರುತ್ತದೆ. ಅದನ್ನು ನಾವು ಈಗಾಗಲೇ ನೋಡಿದ್ದೇವೆ.

ವಿಶ್ವಾಸಿಗಳಾಗಿರುವ ನಾವು ಯಾರಿಗೂ ಅಡ್ಡಿಯನ್ನುಂಟು ಮಾಡಬಾರದು ಅಥವಾ ಒಬ್ಬರಿಗೊಬ್ಬರು ನಾವು ನೋವುಂಟು ಮಾಡಬಾರದು.

ನಾವು ದೇವರಂತೆ ವರ್ತಿಸುತ್ತಾ ದೇವರ ಸ್ಥಾನವನ್ನು ತೆಗೆದುಕೊಂಡಾಗ, ನಾವು ಒಬ್ಬರಿಗೊಬ್ಬರು ಅಡ್ಡಿಯಾಗುವಂತೆ ನೋವುಂಟು ಮಾಡಿ ಯಾವುದೇ ಪರಿಣಾಮವಿಲ್ಲದ (ನಿಷ್ಪ್ರಯೋಜಕ) ವಿಷಯಗಳಲ್ಲಿ ತೀರ್ಪು ನೀಡುತ್ತೇವೆ (ರೋಮಾಪುರದವರಿಗೆ 14:4). ಹಾಗೂ ಎಲ್ಲಾ ಕರ್ತನು ನಮಗೆ ನಮ್ಮ ಆಯ್ಕೆಯನ್ನು ನಾವೇ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ನೀಡಿದ್ದಾನೋ, ಅವುಗಳಿಗೆಲ್ಲ ನಾವು ಉತ್ತರ ಕೊಡುವವರಾಗಿದ್ದೇವೆ (ರೋಮಾಪುರದವರಿಗೆ 14:2).

ನಾವು ಯಾವಾಗ ಇತರರನ್ನು ನಿಂದಿಸುತ್ತಾ, ಇತರರನ್ನು ಕೀಳಾಗಿ ನೋಡುತ್ತಾ, ತಾತ್ಸಾರ ಮಾಡುತ್ತಾ, ನಮ್ಮ ದೊಡ್ಡಸ್ತಿಕೆಯನ್ನು ಅವರ ಮುಂದೆ ಮೆರೆಸುತ್ತಾ ನಾವು ಅವರಿಗಿಂತ ಉತ್ತಮರು, ಅವರು ಏನೂ ಇಲ್ಲ ಎಂಬಂತೆ ವರ್ತಿಸುವಾಗ ನಾವು ಇತರರಿಗೆ ನೋವುಂಟು ಮಾಡುವರಾಗಿದ್ದೇವೆ.

ಕಡೆಯ ಮಾತೇನೆಂದರೆ, ನಾವು ನೋವು, ಅವಮಾನಗಳನ್ನು ನಮ್ಮೊಳಗೆ ತೆಗೆದುಕೊಳ್ಳಬಾರದು ಹಾಗೂ ಆ ನೋವಿನಲ್ಲಿ ಕಾರ್ಯವೆಸಗಬಾರದು ಎಂಬ ಕಠಿಣ ನಿರ್ಧಾರವನ್ನು ಮಾಡಬೇಕು.

## ಪುನರಾವಲೋಕನ

1) ನೋವು ಉಂಟಾದ ಹೃದಯವು ಗಾಯಗೊಂಡ ಹೃದಯವಾಗಿದೆ. ಈ ನೋವನ್ನು ನಾವು ಅಂತರ್ಯದಲ್ಲಿ ಇಟ್ಟುಕೊಂಡಾಗ ಅದು ನಮ್ಮ ಮೇಲೆ ಯಾವ ರೀತಿಯ ವೈಯಕ್ತಿಕವಾದ ಪರಿಣಾಮವನ್ನು ಬೀರುತ್ತದೆ?

2) ನೋವಿನಿಂದ ಹುಟ್ಟುವ ಕೆಲವು ನಕಾರಾತ್ಮಕ ಭಾವನೆಗಳು ಯಾವುವು? ಇದು ನಮ್ಮ ಮೇಲೆ ಹಾಗೂ ನಮ್ಮ ಸುತ್ತಲೂ ಇರುವ ಜನರ ಮೇಲೆ ಹೇಗೆ ಪರಿಣಾಮವನ್ನು ಬೀರುತ್ತದೆ?

3) ರೋಮಾಪುರದವರಿಗೆ ಬರೆದ ಪತ್ರಿಕೆ 14:10,13 ಕ್ಕೆ ಅನುಸಾರವಾಗಿ ಇತರರಿಗೆ ಅಡ್ಡಿ, ಅಥವಾ ನೋವುಂಟುಮಾಡುವ ಯಾವ ಎರಡು ಸಂಗತಿಗಳನ್ನು ಮಾಡಬಾರದು?

# 5
# ಪ್ರೀತಿಯು ನಮ್ಮನ್ನು ಸ್ವತಂತ್ರರನ್ನಾಗಿ ಇಡುತ್ತದೆ

ಹಿಂದಿನ ಅಧ್ಯಾಯಗಳಲ್ಲಿ ನಮಗೆ ನೋವು ಉಂಟಾದಾಗ ನಾವು ನಮ್ಮ ಹೃದಯದಲ್ಲಿ ಮಾಡಬೇಕಾದ 4 ಆಯ್ಕೆಗಳ ಬಗ್ಗೆ ಚರ್ಚಿಸಿದ್ದೇವೆ.

1) ಬಿಟ್ಟುಬಿಡಿರಿ.

2) ರೋಮಾಪುರದವರಿಗೆ 12:17–21ಕ್ಕೆ ಅನುಸಾರವಾಗಿ ಸ್ಪಂದಿಸಿ ಹಾಗೂ ದೇವರೇ ನಿನ್ನನ್ನು ಸಮರ್ಥಿಸಲಿ.

3) ಅಹಂಕಾರವು ನಿಮ್ಮ ಹೃದಯವನ್ನು ಆಳಲು ಬಿಡಬೇಡಿ.

4) ನೋವಿನಲ್ಲಿ ಕಾರ್ಯ ಮಾಡಬೇಡಿ.

ಈ ಅಧ್ಯಾಯವು ನಮಗೆ ನೋವುಂಟಾದಾಗ, ನಾವು ಹೃದಯದಲ್ಲಿ ಮಾಡಬೇಕಾದ ಐದನೇ ಪ್ರಮುಖವಾದ ಆಯ್ಕೆಯ ಕುರಿತಾಗಿ ಮಾತನಾಡುತ್ತದೆ. ನಾವು ಪ್ರೀತಿಯಲ್ಲಿ ನಡೆಯುತ್ತೇವೆ ಎಂಬ ಒತ್ತಾಯಪೂರ್ವಕವಾದ ನಿರ್ಧಾರವನ್ನು, ಆಯ್ಕೆಯನ್ನು ಮಾಡಬೇಕು. ಯಾಕಂದರೆ ಪ್ರೀತಿಯು ನಮ್ಮ ಹೃದಯಗಳನ್ನು ಶುದ್ಧವಾಗಿಯೂ ಸ್ಪಷ್ಟವಾಗಿಯೂ ಸ್ವಾತಂತ್ರ್ಯದಲ್ಲಿಯೂ ಇಡುತ್ತದೆ.

## ಪ್ರೀತಿಯು ನಿಮ್ಮ ಹೃದಯವನ್ನು ಸ್ವಚ್ಛಗೊಳಿಸುತ್ತದೆ

**1 ಯೋಹಾನನು 2:10**
**ತನ್ನ ಸಹೋದರನನ್ನು ಪ್ರೀತಿಸುವವನು ಬೆಳಕಿನಲ್ಲಿ ನೆಲೆಗೊಂಡಿದ್ದಾನೆ, ಮತ್ತು ಅವನಲ್ಲಿ ವಿಘ್ನಕರವಾದದ್ದು** (ಗ್ರೀಕ್ ಪದ ಸ್ಕ್ಯಾಂಡಲನ್) **ಏನೂ ಇಲ್ಲ.**

ನಮ್ಮ ಮೂಲಕ ಹರಿಯುವ ದೇವರ ಪ್ರೀತಿಯೇ ನೋವಿಗೆ ಶ್ರೇಷ್ಠವಾದ ಔಷಧಿಯಾಗಿರುತ್ತದೆ.

ನಮಗೆ ನೋವು ಹಾಗೂ ಅವಮಾನ ಉಂಟಾದಾಗ ಅಥವಾ ನಮಗೆ ಕೋಪ ಬಂದಾಗ ನಮ್ಮೊಳಗೆ ನೋವಿನ ಅನುಭವವಾಗುತ್ತದೆ. ''ನಮಗೆ ಕೊಟ್ಟಿರುವ

ಪವಿತ್ರಾತ್ಮನ ಮೂಲಕವಾಗಿ ದೈವರ ಪೀತಿರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದದೆಯಲ್ಲಾ.'' ಆದರೆ ಆ ಕ್ಷಣದಲ್ಲಿ ದೇವರ ಆತ್ಮನು ನಮ್ಮ ಹೃದಯಗಳಲ್ಲಿ ಸುರಿಸಿರುವ ಆ ಪ್ರೀತಿಯು (ರೋಮಾಪುರದವರಿಗೆ 5:5) ನಮ್ಮ ಒಳಗಿನಿಂದ ಹರಿದು ನಮಗೆ ನೋವನ್ನುಂಟು ಮಾಡಿದ ವ್ಯಕ್ತಿಯನ್ನು (ಅಥವಾ ಜನರನ್ನು) ಸ್ಪರ್ಶಿಸಬೇಕೆಂದು ನಾವು ದೇವರ ಪ್ರೀತಿಯನ್ನು ಆಹ್ವಾನಿಸಬೇಕು.

ನಾವು ಹೀಗೆ ಮಾಡುವ ನಿರ್ಧಾರವನ್ನು ತೆಗೆದುಕೊಂಡು ಪ್ರೀತಿಯ ಹೃದಯವಂತಿಕೆಯಲ್ಲಿ ನಡೆಯುವಾಗ ನಾವು ಬೆಳಕಿನಲ್ಲಿ ನೆಲೆಗೊಳ್ಳುತ್ತೇವೆ. ದೇವರ ಬೆಳಕು ನಮ್ಮ ಸಂಪೂರ್ಣ ವ್ಯಕ್ತಿತ್ವವನ್ನು ಆವರಿಸಿಕೊಳ್ಳುತ್ತದೆ ಹಾಗೂ ನಮ್ಮ ಹೃದಯಗಳು ನಿರ್ಮಲವಾಗಿಯೂ, ಸ್ಪಷ್ಟವಾಗಿಯೂ ಸ್ವತಂತ್ರವಾಗಿಯೂ ಇರುತ್ತವೆ. ಆಗ ನೋವಿಗೆ ( *ಗೀಕ್ ಸ್ಕ್ಯಾಂಡಲನ್*) ನಮ್ಮಲ್ಲಿ ಯಾವ ಸ್ಥಳಾವಕಾಶವೂ ಇರುವುದಿಲ್ಲ ಹಾಗೂ ನಮ್ಮನ್ನು ಬೋನಿಗೆ ಸಿಲುಕಿಸುವ ಅಥವಾ ನಾವು ಎಡವಿ ಮುಗ್ಗರಿಸಿವಂತೆ ಮಾಡುವ ಯಾವ ಸಂಗತಿಗಳೂ ಇರುವುದಿಲ್ಲ. ಪ್ರೀತಿಯು ನೋವಿಗೆ ಯಾವ ಅವಕಾಶವನ್ನು ಬಿಟ್ಟುಕೊಡುವುದಿಲ್ಲ. ಪ್ರೀತಿ ಹಾಗೂ ನೋವು ಈ ಎರಡು ಜೊತೆಯಾಗಿ ವಾಸಿಸಲು ಸಾಧ್ಯವಿಲ್ಲ.

ದೇವರ ಪ್ರೀತಿಯು ನಮ್ಮ ಹೃದಯಗಳಲ್ಲಿ ನೆಲೆಯಾಗಿ ಇರುವಾಗ ನಾವು ನಮಗೆ ನೋವು ಉಂಟುಮಾಡಿದ ಜನರಿಗೆ ಕ್ಷಮಾಪಣೆಯನ್ನು ಹಾಗೂ ಆಶೀರ್ವಾದವನ್ನು ಬಿಡುಗಡೆ ಮಾಡುತ್ತೇವೆ.

ನಾವು ಈಗ ನಮಗೆ ನೋವನ್ನುಂಟು ಮಾಡಿದ ವ್ಯಕ್ತಿ (ಅಥವಾ ಜನರೊಂದಿಗೆ) ಮಾತನಾಡಲು ಸಾಧ್ಯವಾಗುತ್ತದೆ. ನಮ್ಮ ಹೃದಯಗಳಲ್ಲಿ ಅವರ ಕುರಿತಾಗಿ ಪ್ರೀತಿಯ ಭಾವನೆಯನ್ನು ಬಿಟ್ಟು ಬೇರೇನೂ ಇರುವುದಿಲ್ಲ. ಅವರು ಮಾಡಿದ ಯಾವ ಕ್ರಿಯೆಗಳಿಂದ ನಮಗೆ ನೋವು ಉಂಟಾಯಿತು ಎಂಬುದನ್ನು ನಾವು ಅವರಿಗೆ ತಿಳಿಸಬಹುದು. ಆದರೆ ಇವುಗಳನ್ನು ಯಾವ ಕೋಪ ಅಥವಾ ನೋವು ಅಥವಾ ಸೇಡಿನ, ಮನಸ್ತಾಪದ ಮನೋಭಾವವಿಲ್ಲದೆ ಮಾಡಬಹುದು. ಅದನ್ನು ನಾವು ಪ್ರೀತಿಯಿಂದಲೂ ಕ್ಷಮಾಪಣೆಯ ಆತ್ಮದಿಂದಲೂ ಮಾಡಬಹುದು.

## ಪ್ರೀತಿಯು ಎಲ್ಲವನ್ನೂ ಜಯಿಸಿ ಗೆಲ್ಲುತ್ತದೆ

**ಜ್ಞಾನೋಕ್ತಿಗಳು 10:12**

**ದ್ವೇಷವು ಜಗಳಗಳನ್ನೆಬ್ಬಿಸುತ್ತದೆ; ಪ್ರೀತಿಯು ಪಾಪಗಳನ್ನೆಲ್ಲಾ ಮುಚ್ಚುತ್ತದೆ.**

**ಜ್ಞಾನೋಕ್ತಿಗಳು 17:9**
**ದೋಷವನ್ನು ಮುಚ್ಚಿಡುವವನು ಪ್ರೇಮವನ್ನು ಸೆಳೆಯುವನು; ಎತ್ತಿ ಆಡುತ್ತಿರುವವನು ಸ್ನೇಹವನ್ನು ಕಳೆದುಕೊಳ್ಳುವನು.**

ನಮಗೆ ನೋವುಂಟಾದಾಗ ಅದಕ್ಕೆ ಪ್ರತಿಕ್ರಿಯೆಯಾಗಿ ನಾವು ಪ್ರೀತಿಯಲ್ಲಿ ಅವರೊಡನೆ ವರ್ತಿಸುವಾಗ ನಾವು ನಮಗೆ ನೋವುಂಟು ಮಾಡಿದವರ ಮೇಲೆ ಸೇಡು ತೀರಿಸಿಕೊಳ್ಳುವ ಭಾವನೆ ಬರುವದಿಲ್ಲ. ಅವರು ನಮಗೆ ನೋವಾಗುವಂತಹ ಏನೇ ತಪ್ಪು ಮಾಡಿದ್ದರೂ, ನಾವು ಅವರ ತಪ್ಪುಗಳನ್ನು ಮುಚ್ಚುವ ಪ್ರಯತ್ನ ಮಾಡುತ್ತೇವೆ.

ನಾವು ಇತರರೊಂದಿಗೆ ಅವರ ಬಗ್ಗೆ ಮಾತನಾಡುವಾಗ ನಮ್ಮ ಮಾತುಗಳ ಬಗ್ಗೆ ಎಚ್ಚರ ಉಳ್ಳವರಾಗಿರುತ್ತೇವೆ. ಅವರ ನಿಜವಾದ ವ್ಯಕ್ತಿತ್ವದ ಬಗ್ಗೆ ತಿರುಚುವ ಅಥವಾ ಅಗೌರವ ತೋರುವ ಇಲ್ಲವೇ ಯಾವದೇ ವಿಧವಾದ ಕೀಳು ಮಾತುಗಳನ್ನು ಆಡಲು ಅಥವಾ ಅದನ್ನು ತಿರುಗೊಮ್ಮೆ ಮಾತನಾಡಲು ನಾವು ನಿರಾಕರಿಸುತ್ತೇವೆ. ಅವರ ಹಾಗೂ ಇತರರ ಸಂಬಂಧದ ಮಧ್ಯೆ ಬಿರುಕು ತರುವ ಯಾವುದೇ ಮಾತುಗಳನ್ನು ನಾವು ಆಡದಂತೆ ಎಚ್ಚರ ವಹಿಸುತ್ತೇವೆ.

ಇದುವೇ ಎಲ್ಲವನ್ನೂ ಜಯಿಸುವ ಪ್ರೀತಿ. ಇದುವೇ ನೋವನ್ನು ಗೆದ್ದು ಜಯಿಸುವ ಪ್ರೀತಿ. ಇದುವೇ ವೈರಿಯು ನಾವು ಎಡವಿ ಬೀಳಬೇಕೆಂದು ಕಾದು ಇಟ್ಟಿರುವ ಬೋನುಗಳನ್ನು, ತಡೆಗಳನ್ನು ಗೆದ್ದು ನಿಲ್ಲುವ ಪ್ರೀತಿ.

## ಏನೇ ಬರಲಿ, ಪ್ರೀತಿ ಮಾಡಿ

**1 ಯೋಹಾನನು 4:11**
**ಪ್ರಿಯರೇ, ದೇವರು ನಮ್ಮನ್ನು ಹೀಗೆ ಪ್ರೀತಿಸಿದ ಮೇಲೆ ನಾವು ಒಬ್ಬರನ್ನೊಬ್ಬರು ಪ್ರೀತಿಸುವ ಹಂಗಿನಲ್ಲಿದ್ದೇವೆ.**

ನೋವಾದ ಸಂದರ್ಭದಲ್ಲಿ ದೇವರ ಪ್ರೀತಿಯಿಂದ ಪ್ರೀತಿಸುವುದು ಸುಲಭದ ಮಾತಲ್ಲ. ನಮಗೆ ನೋವು ಮಾಡುವ ವ್ಯಕ್ತಿಗಳಿಗೆ ನಾವು ಈ ರೀತಿ ಪ್ರೀತಿಯನ್ನು ತೋರಿಸಲೇಬಾರದು ಎಂಬ ಅನಿಸಿಕೆಗಳ ಹಿಂದೆ ಅನೇಕ ಕಾರಣಗಳು ಇವೆ. ಆದರೆ ಆ ಸಮಯದಲ್ಲಿ ನಾವು ಒಂದನ್ನು ನೆನಪಿಸಿಕೊಳ್ಳಬೇಕು. ಅದೇನೆಂದರೆ ದೇವರು ನಮ್ಮನ್ನು ಅವರ್ಣನೀಯವಾದ ರೀತಿಯಲ್ಲಿ , ಮಿತಿ ಇಲ್ಲದಷ್ಟು ಪ್ರೀತಿ

ಮಾಡುವುದಾದರೆ ನಮಗೆ ನೋವು ಮಾಡಿದವರನ್ನು ನಾವು ಅದೇ ರೀತಿಯಲ್ಲಿ ಪ್ರೀತಿಸಿದ ಹೊರತು ನಮಗೆ ಬೇರೆ ಆಯ್ಕೆ ಇಲ್ಲ. ಆದುದರಿಂದ ನಾವು ನಮಗೆ ನೋವು ಮಾಡಿದ ವ್ಯಕ್ತಿಯನ್ನು (ಅಥವಾ ವ್ಯಕ್ತಿಗಳನ್ನು) ಏನೇ ಆದರೂ ಪ್ರೀತಿಸುವ ಹಂಗಿನಲ್ಲಿ ಇದ್ದೇವೆ.

## ನಿಮ್ಮ ಪ್ರೀತಿಯು ಕೃತ್ಯದಲ್ಲಿ ಕಂಡು ಬರಲಿ, ಕೇವಲ ಮಾತಿನಲ್ಲಿ ಅಲ್ಲ

**1 ಯೋಹಾನನು 3:18**
**ಪ್ರಿಯರಾದ ಮಕ್ಕಳೇ, ನಾವು ಬರೀ ಮಾತಿನಿಂದಾಗಲಿ, ಬಾಯುಪಚಾರದಿಂದಾಗಲಿ ಪ್ರೀತಿಸುವವರಾಗಿರಬಾರದು; ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ, ಸತ್ಯದಲ್ಲಿಯೂ ತೋರಬೇಕು.**

**ರೋಮಾಪುರದವರಿಗೆ 12:9**
**ನಿಮ್ಮ ಪ್ರೀತಿಯು ನಿಷ್ಕಪಟವಾಗಿರಲಿ ...**

ಇದು ಕೇವಲ ನಮ್ಮ ಬುದ್ಧಿಯಿಂದ ಬಂದ ಸುಂದರವಾದ ಮಾತುಗಳನ್ನು, ಅಥವಾ ನಮಗೆ ಅನಿಸಿದ ಮಾತುಗಳನ್ನು ಆಡುವುದಲ್ಲ , ಬದಲಾಗಿ ನಮ್ಮ ಜೀವಿತದಲ್ಲಿ ಮಾಡುವ ನಿಜವಾದ ಕಾರ್ಯಗಳಾಗಿವೆ. ನಮ್ಮ ಪ್ರೀತಿ ನಿಷ್ಕಪಟವಾದದ್ದು. ಅದು ಸತ್ಯವಾದದ್ದು, ಹಾಗೂ ನಿಜವಾದದ್ದು. ಅದು ನಮ್ಮ ಹೃದಯದಿಂದ ಹೊರಹೊಮ್ಮಿ ಬರುತ್ತದೆ. ಅದು ಹಳೆಯ ಸಂಗತಿಗಳನ್ನು ಅಳಿಸಿಹಾಕುತ್ತದೆ. ನಮಗೆ ನೋವುಂಟು ಮಾಡಿದವರನ್ನು ಅವರ ತಪ್ಪಿನಿಂದ ಬಿಡುಗಡೆ ಮಾಡುತ್ತದೆ. ಇದುವೇ ನಾವು ಜೀವಿಸಬೇಕಾದ ವಿಧವಾಗಿದೆ.

ಪ್ರೀತಿಯು ಕೇವಲ ನಮಗೆ ನೋವು ಮಾಡಿದವರನ್ನು ಬಿಡುಗಡೆ ಮಾಡುವುದು ಮಾತ್ರವಲ್ಲ, ಅದು ನಮ್ಮನ್ನು ಬಿಡುಗಡೆ ಮಾಡುತ್ತದೆ. ನಾವು ಆಗ ನಿರ್ಮಲರಾಗಿ, ಸ್ಪಷ್ಟವಾಗಿ ಹಾಗೂ ಸ್ವತಂತ್ರರಾಗಿ ಇರುತ್ತೇವೆ.

ಪ್ರೀತಿಯು ನಮ್ಮನ್ನು ನೋವಿನ ರೇಖೆಗಿಂತಲೂ ಮೇಲಣ ಸ್ತರದಲ್ಲಿ ಜೀವಿಸಲು ಬಿಡುಗಡೆ ಮಾಡುತ್ತದೆ. ಸದಾಕಾಲವೂ ನೋವಿನ ರೇಖೆಗಿಂತಲೂ ಮೇಲಿನ ಸ್ತರದಲ್ಲಿ ಜೀವಿಸಿರಿ. ಯಾವಾಗಲೂ ಪ್ರೀತಿಯಲ್ಲಿ ಜೀವಿಸಿರಿ.

## ಪುನರಾವಲೋಕನ

1) ನೀವು ಪ್ರೀತಿಯಲ್ಲಿ ತುಂಬಿದವರಾಗಿ ಬಿಡುಗಡೆ ಮಾಡಬೇಕಾದ ನಿಮ್ಮನ್ನು ನೋಯಿಸಿದ ಯಾರಾದರೂ ವ್ಯಕ್ತಿಗಳು ಇದ್ದಾರೋ? ಈ ಅಧ್ಯಾಯವನ್ನು ಸಮಯಾವಕಾಶ ತೆಗೆದುಕೊಂಡು ಓದಿರಿ, ಹಾಗೂ ಅಂತಹ ವ್ಯಕ್ತಿಯ (ಅಥವಾ ವ್ಯಕ್ತಿಗಳ) ಕಡೆಗೆ ಪ್ರೀತಿಯ ಪ್ರತಿಯೊಂದು ಕಾರ್ಯವನ್ನು ಅನುಸರಿಸಿ ತೋರಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವನ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ. ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ 5000 ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು, ದೇವರು ಒಳ್ಳೆಯ ದೇವರಾಗಿದ್ದಾನೆ, ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಆತನು ಬಯಸುತ್ತಾನೆ. ಆತನು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ನಮಗೆ ಪ್ರಕಟಿಸುತ್ತಾನೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಸುತ್ತದೆ ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ***''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ''*** ಎಂದು ಹೇಳುತ್ತದೆ **(ರೋಮಾಪುರದವರಿಗೆ 6:23).** ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ ಮತ್ತು ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ. ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ

ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ—ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

***''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು ...''*** **(ಅಪೊಸ್ತಲರ ಕೃತ್ಯಗಳು 10:43).**

***''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವುದು ಎಂಬುದು''*** **(ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

*ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.*

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು. ಆಮೇನ್*

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರಕ್ಕೆ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು **ಯೇಸು ಕಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರಿಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ,** ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- ಒಂದು **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತನ ಕೇಂದ್ರಿತ ಸಹಭಾಗಿತ್ವ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- ಒಂದು **ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಿ ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- ಒಂದು **ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸುಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ರಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ದೇಶಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- ಒಂದು **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವುದರಿಂದ ಸ್ಥಳೀಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕ ಕಾರ್ಯ, ಅದ್ಭುತಕಾರ್ಯ, ಮಹಾತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಮುಖ್ಯ ನೆಲೆಯೊಡನೆ ಭಾರತದಲ್ಲಿ ಅನೇಕ ಇತರ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿಸಿ. **apcwo.org/locations** ಅಥವಾ **contact@apcwo.org** ಗೆ ಇ-ಮೇಲ್ ಕಳುಹಿಸಿರಿ.

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don't Compromise Your Calling
Don't Lose Hope
Equipping the Saints
Foundations (Track 1)
Fulfilling God's Purpose for Your Life
Gifts of the Holy Spirit
Giving Birth to the Purposes of God
God Is a Good God
God's Word—The Miracle Seed
How to Help Your Pastor
Integrity
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses—Don't Take Them
Open Heavens
Our Redemption
Receiving God's Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father's Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner's Fire
The Spirit of Wisdom, Revelation and Power
The Wonderful Benefits of Speaking in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು ಪಿ.ಡಿ.ಎಫ್ ನಲ್ಲಿ, ಆಡಿಯೋ ಮತ್ತು ಇತರ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ.ಇವುಗಳಲ್ಲಿ ಅನೇಕ ಪುಸ್ತಕಗಳು ಇತರ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

# ಕ್ರಿಸಾಲಿಸ್ ಕೌನ್ಸೆಲಿಂಗ್(ಸಲಹೆ)

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ್ ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರೈಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವುದಾಗಿದೆ.

- **ಹದಿಹರೆಯದವರು**
- **ವೈಯಕ್ತಿಕ ಹೊಂದಾಣಿಕೆಗಳು**
- **ಸಂಬಂಧಿತ ಸವಾಲುಗಳು**
- **ಶೈಕ್ಷಣಿಕ ಕಡಿಮೆ ಸಾಧನೆ**
- **ಕೆಲಸಕ್ಕೆ ಸಂಬಂಧಿಸಿದ ಸಮಸ್ಯೆಗಳು**
- **ಕುಟುಂಬ / ದಂಪತಿಗಳು: ವಿವಾಹಪೂರ್ವ, ವೈವಾಹಿಕ**
- **ಪೋಷಕರು / ಮಕ್ಕಳು / ಒಡಹುಟ್ಟಿದವರು / ಗೆಳೆಯರು**
- **ವರ್ತನೆಯ ಅಸ್ತವ್ಯಸ್ತತೆಗಳು**
- **ವ್ಯಕ್ತಿತ್ವ ಅಸ್ತವ್ಯಸ್ತತೆಗಳು**
- **ಮಾನಸಿಕ / ಭಾವನಾತ್ಮಕ ಸಮಸ್ಯೆಗಳು**
- **ಒತ್ತಡ / ಆಘಾತ**
- **ಮಧುಪಾನ/ ಮಾದಕ ವಸ್ತು ದುರುಪಯೋಗ**
- **ಆತ್ಮೀಕ ಸಮಸ್ಯೆಗಳು**
- **ಜೀವನ ತರಬೇತಿ**

ಕ್ರಿಸಾಲಿಸ್ ಕೌನ್ಸೆಲಿಂಗ್ ಸೇವೆಗಳು ಕೈಗೆಟುಕುವ ಶುಲ್ಕಗಳು ಮತ್ತು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

**ವೆಬ್ಸೈಟ್: chrysalislife.org**
**ದೂರವಾಣಿ**: +91-80-25452617 ಅಥವಾ ಟೋಲ್-ಫ್ರೀ (ಭಾರತದೊಳಗೆ) 1-800-300-00998
**ಇಮೇಲ್: counselor@chrysalislife.org**

ಕ್ರಿಸಾಲಿಸ್ ಕೌನ್ಸೆಲಿಂಗ್ ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್‌ನ ಒಂದು ಸೇವೆಯಾಗಿದೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ 'ಸೇವಕರ ಸಮಾವೇಶವನ್ನು' ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆಯುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ ''ಆಲ್ ಪೀಪಲ್ಸ್ ಸಭೆ'' ಬೆಂಗಳೂರು ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು.

**Account Name:** All Peoples Church
**Account Number:** 50200068829058
**IFSC Code:** HDFC0004367
**Bank:** HDFC Bank, 7M/308 80 Ft Road, HRBR Layout, Kalyan Nagar, Bengaluru, 560043, Karnataka

***ದಯವಿಟ್ಟು ಗಮನಿಸಿ:*** *ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿ:* **apcwo.org/give.**

ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!


**ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!**

# DOWNLOAD THE FREE APP!

*Search for*
"All Peoples Church Bangalore"
in the App or Google play stores.

Available on the App Store

ANDROID APP ON Google play




*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

Bible College

& MINISTRY TRAINING CENTRE

## ಆಲ್ ಪೀಪಲ್ಸ್ ಚರ್ಚ್ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

**apcbiblecollege.org**

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು ಎಪಿಸಿ–ಬಿ.ಸಿ (ಎಪಿಸಿ–ಬಿ.ಸಿ) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು–ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಏ.ಪಿ.ಸಿ–ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೆಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳು ನೀಡುತ್ತೇವೆ.

- ಒಂದು-ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
- ಎರಡು-ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (Dip.Th.)
- ಮೂರು-ವರ್ಷದ ಬ್ಯಾಚುಲರ್ಸ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ **ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 9 ರಿಂದ ಮದ್ಯಾಹ್ನ 1 ರವರೆಗೆ ಜರುಗುತ್ತದೆ. ಭಾರತದ ಕಾಲಾಮಾನ (ಸಂಘಟಿತ ಸಾರ್ವತ್ರಿಕ ಸಮಯ+5:30).** ನಾವು ಇತರೆ ಮೂರು ಕಲಿಕಾ ಐಚ್ಛಿಕ ವಿಷಯಗಳನ್ನು ನೀಡುತ್ತೇವೆ.

- **ಆನ್–ಕ್ಯಾಂಪಸ್:** ಅಧ್ಯಯನ ಆವರಣದಲ್ಲಿ ವೈಯಕ್ತಿಕ ತರಗತಿಗಳಿಗೆ ಹಾಜರಾಗುವುದು.
- **ಆನ್ ಲೈನ್:** ಆನ್ಲೈನ್ ನ ನೇರ ಉಪನ್ಯಾಸಗಳಿಗೆ ಹಾಜರಾಗುವುದು.
- **ಇ–ಕಲಿಕೆ:** ಆನ್ಲೈನ್ ಪೋರ್ಟಲ್ ಆದ **apcbiblecollege.org/elearn** ನ ಮೂಲಕ ಸ್ವಯಂ ಚಾಲಿತವಾಗಿ ಕಲಿಯುವುದು.

**ಆನ್ಲೈನ್‌ನಲ್ಲಿ ಅರ್ಜಿ ಸಲ್ಲಿಸಲು** ಮತ್ತು ಕಾಲೇಜು ಪಠ್ಯಕ್ರಮ, ಅರ್ಹತಾ ಮಾನದಂಡ, ಬೋಧನಾ ವೆಚ್ಚಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಲು ದಯವಿಟ್ಟು **apcbiblecollege.org** ಯನ್ನು ಸಂಪರ್ಕಿಸಿರಿ.

ಜೀವನದಲ್ಲಿ, ಎಲ್ಲಾ ರೀತಿಯ ವಿಷಯಗಳು ನೋವನ್ನು ಉಂಟುಮಾಡಬಹುದು. ಒಮ್ಮೆ ನಾವು ನೋವನ್ನು ಮನಸ್ಸಿಗೆ ತೆಗೆದುಕೊಂಡರೆ, ಇದು ಅಂತಿಮವಾಗಿ ನಾವು ಊಹಿಸಿಕೊಳ್ಳುವುದಕ್ಕಿಂತ ಹೆಚ್ಚಿನ ರೀತಿಯಲ್ಲಿ ನಮ್ಮ ಮೇಲೆ ಪರಿಣಾಮ ಬೀರುವ ಮೂಲಕವಾಗಿ  ನಮ್ಮೊಳಗೆ ಕಾರ್ಯ ಮಾಡುತ್ತದೆ ನಾವು ಮನನೊಂದ ಹೃದಯದಿಂದ ಕಾರ್ಯನಿರ್ವಹಿಸಿದಾಗ, ನಾವು ಸಾಮಾನ್ಯವಾಗಿ ಹೆಚ್ಚು ವಿವೇಕವಿಲ್ಲದ ಮತ್ತು ವಿಲಕ್ಷಣವಾದ ರೀತಿಯಲ್ಲಿ ಯೋಚಿಸುತ್ತೇವೆ, ಹೇಳುತ್ತೇವೆ ಮತ್ತು ವರ್ತಿಸುತ್ತೇವೆ. ಇದು ಸಭಾ ಜೀವನದಲ್ಲಿ ಕಾರ್ಯಮಾಡುವಾಗ, ದೇವಜನರ ಮಧ್ಯದಲ್ಲಿ,ನಾವು ಅತ್ಯಂತ ದುಃಖಕರವಾದ ಕೆಲವು ಸಂಗತಿಗಳು ಜರುಗುವುದನ್ನು ನೋಡುತ್ತೇವೆ!

ನೋವುಂಟು ಮಾಡುವುದರ ಕುರಿತು ಸತ್ಯವೇದವು ಏನು ಹೇಳುತ್ತದೆ? ನಾವು ಮನನೊಂದಾಗ ಹೇಗೆ ಪ್ರತಿಕ್ರಿಯಿಸಬೇಕು? ನಾವು ಮನನೊಂದಾಗ ಬರಬಹುದಾದ ನಕಾರಾತ್ಮಕ ಭಾವನೆಗಳನ್ನು  ಹೇಗೆ ತೊಡೆದುಹಾಕಬಹುದು? ದೇವರ ವಾಕ್ಯದಿಂದ ಈ ಸರಳವಾದ ಆದರೆ ಜ್ಞಾನೋದಯವಾದ ಅಧ್ಯಯನವು ಈ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸುತ್ತದೆ ಮತ್ತು ನೀವು ಸಂಪೂರ್ಣವಾಗಿ ನೋವು ಇಲ್ಲದವರಾಗಿ ಬದುಕಲು ಸಹಾಯ ಮಾಡುತ್ತದೆ.

ಯಾವಾಗಲೂ ನೋವಿನ  ರೇಖೆಯ ಮೇಲೆ ವಾಸಿಸಿರಿ.


**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org